ಷೇ:ಟೆಮಾತ್ರೇನಜ್ಜಿ ?

ಾಚಕರಿಗೆ ಉಪಯುಕ್ತವಾದ ಗ್ರಂಥ.

ಎಂ. ಎಸ್. ಪುಟ್ಟಣ್ಣ.

ಕನ್ನಡ ಭ
ಒ ವಿದೆ. ನಾಯಕ
ದನೆ ಮಾಡತಕ್ಕ ವಿ
ುವುದಕ್ಕೆ ಈ ಕಥೆ
ರ್ಥನಾದೆ.

ಪ್ರಭವ ಸಂವತ್ಸರದ
ಶು|| ೧|| ಸೋವ

1927.

PREFACE.

This story is meant for the entertainment of the reading public. Much of details and descriptions are purposely omitted. If the delineation of characters be found interesting, my object is gained.

Monday
26th September 1927. M. S. P.

ಪೀಠಿಕೆ.

ಕನ್ನಡ ಭಾಷೆಯ ವಾಚಕರ ಉಪಯೋಗಕ್ಕಾಗಿ ಈ ಕಥೆಯನ್ನು ಒ ವಿದೆ. ನಾಯಕ ನಾಯಿಕರ ಗುಣದೋಷಗಳನ್ನು ಹಿಡಿದು ಪರಿಶೋಧನೆ ಮಾಡತಕ್ಕ ವಿದ್ವಾಂಸರು ಮತ್ತೂ ಇತರ ಸಾಧಾರಣ ವಾಚಕರು ವುದಕ್ಕೆ ಈ ಕಥೆಯು ಅರ್ಹವಾದ್ದೆಂದು ಅಭಿಪ್ರಾಯ ಪಟ್ಟರೆ, ನಾನು ರ್ಥನಾದೆ.

ಪ್ರಭವ ಸಂವತ್ಸರದ ಆಶ್ವಯುಜ
ಶು|| ೧|| ಸೋಮವಾರ

ಮೈ. ಸೂ. ಪು.

ಕೊಡುಗೆ :

ಶ್ರೀಮತಿ ವಸಂತ * ಪ್ರೊ॥ ಎಸ್. ಅನಂತನಾರಾಯಣ

ಗಂಗಾ ತರಂಗ

ಪ್ರತಿಷ್ಠಾನ

ಸರಸ್ವತೀಪುರಂ, ಮೈಸೂರು

ಅನಂತ No 0750

ಶ್ರೀ
ಶ್ರೀ ಗಣಾಧಿಪತಯೇನಮಃ
ಶ್ರೀ ಶಾರದಾಂಬಾಯೈನಮಃ
ಶ್ರೀ ಲಕ್ಷ್ಮೀನರಸಿಂಹಾಯನಮಃ

ಪೇಟೆ ಮಾತೇನಜ್ಜ

೧ನೇ ಅಧ್ಯಾಯ.

ಪೂರ್ವಕಾಲದೊಳು ಈ ಭರತಖಂಡದಲ್ಲಿ ಮಾನಸ ಪುರವೆಂಬ ಒಂದು ಪಟ್ಟಣವಿತ್ತು. ಅಲ್ಲಿ ಸತ್ಯಗುಪ್ತರಾಯನೆಂಬ ದೊರೆಯು ಬಹು ವಿತರಣೆಯಿಂದ ರಾಜ್ಯವಾಳುತಿದ್ದನು. ರಾಜರುಗಳಲ್ಲಿ ನಡೆಯುವ ಪೂರ್ವ ಪದ್ಧತಿಯನ್ನು ಅನುಸರಿಸಿ ಈ ದೊರೆಯು ಇಬ್ಬರು ಹೆಂಡಿರನ್ನು ಮದುವೆಯಾಗಿ ಅವರಲ್ಲಿ ವಿಶೇಷವಾದ ಪ್ರೀತಿಯಿಂದಲೂ ಸೌಜನ್ಯದಿಂದಲೂ ನಡೆದುಕೊಳ್ಳುತಾ ಇದ್ದನು. ಈತನಿಗೆ ಬೇಟೆಯಾಡುವುದರಲ್ಲಿ ಹೆಚ್ಚಾದ ಆಸಕ್ತಿ ಇತ್ತು.

ಮಳೆಗಾಲವೆಲ್ಲಾ ತೀರಿ ಬೇಸಿಗೆಯ ಬಿಸಿಲೆ ವಿಶೇಷವಾಗಿ ಹೆಚ್ಚದೇ ಸಾಧಾರಣವಾಗಿರುವಾಗ ಈ ಅರಸನು ಒಂದಾನೊಂದು ದಿವಸ ಮಂತ್ರಿಯನ್ನು ಕರೆದು—ಅಯ್ಯಾ ಮಿತ್ರನೆ, ನಾನು ನಾಳೇ ದಿವಸ ಬೇಟೆಗೆ ಹೊರಡಬೇಕೆಂದು ಇದೇನೆ. ಬೇಟೆಯ ಪರಿವಾರ

ವೆಲ್ಲಾ ನಮ್ಮೊಡನೆ ಹೊರಡಲು ಸಿದ್ಧವಾಗಿರಲಿ. ನಾವಿಬ್ಬರೂ ನಂನಮ್ಮ ಕುದುರೆಗಳನ್ನೇರಿ ಪಂಚ ಪಂಚ ಉಷಃಕಾಲಕ್ಕೆ ಸರಿಯಾಗಿ ಪ್ರಯಾಣ ಮಾಡೋಣ. ಇದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಲು ಈಗಲೇ ಅಪ್ಪಣೆಕೊಡುವನಾಗು. ದುಷ್ಟ ಜಂತುಗಳ ಹಾವಳಿ ಬಲವಾಗಿದೆ. ಇವುಗಳ ಕಾಟದಿಂದ ಪ್ರಜೆಗಳು ನಮ್ಮ ರಾಜಧಾನಿಯಲ್ಲಿಯೂ ಗ್ರಾಮಾಂತರಗಳಲ್ಲಿಯೂ ಕೇವಲ ಕಷ್ಟಕ್ಕೆ ಗುರಿಯಾಗಿದಾರೆ. ಅಂಥಾ ಮೃಗಗಳನ್ನು ಕೊಂದು ಪ್ರಜಾರಕ್ಷಣೆಯನ್ನು ಮಾಡಿದಂತೆಯೂ ಆಗುವುದು; ಮತ್ತು ರಾಜ್ಯಭಾರದ ಕಾರ್ಯೋದ್ಯೋಗದಿಂದುಂಟಾಗಿರುವ ಮನಸ್ಸಿನ ಬೇಜಾರೂ ತೊಲಗುವುದು, ಹೀಗೆಂದು ಅಪ್ಪಣೆ ಮಾಡಿದನು. ಆಗ ಮಂತ್ರಿಯು— ಬುದ್ಧಿ, ಮಹಾಪ್ರಸಾದ, ಅಪ್ಪಣೆಯಾದ್ದಕ್ಕೆ ಅನ್ಯಥಾ ಉಂಟೆ? ಸವಾರಿ ಹೊರಡುವಾಗ ಎಲ್ಲಾ ಸಿದ್ಧವಾಗಿದ್ದೀತು, ಎಂದು ಅರಿಕೆ ಮಾಡಿ ತನ್ನ ಮನೆಗೆ ಬಂದು ತನಗೆ ಬೇಕಾದ ಇಲಾಖಾ ಗುರಿಕಾರರುಗಳನ್ನು ಕರೆಯಿಸಿ ಅವರನ್ನು ಕುರಿತು—ಅಯ್ಯಾ, ಗುರಿಕಾರರುಗಳಿರ, ನಾಳೆ ಪ್ರಾತಃಕಾಲಕ್ಕೆ ಐದು ಗಳಿಗೆ ಇರುವಾಗಲೇ ಬೆಳಗಿನ ಜಾವದ ಗಸ್ತೀ ಕಾವಲಿನವರು ಹೊರಡುವ ಹೊತ್ತಿಗೆ ಸರಿಯಾಗಿ ನೀವೆಲ್ಲರೂ ನಿಂನಿಮ್ಮ ಕೈ ಕೆಳಗಿನ ಭಟರು ಸಮೇತವಾಗಿ ಖಾಸ ಸವಾರಿಯ ಹಿಂದೆ ಬೇಟೆಗೆ ಹೊರಡಬೇಕು; ಕರ್ಣಾಟಕ ಕೋವಿಯವರು ಮದ್ದು ಗುಂಡು ಸಹಾ ತೆಗೆದುಕೊಂಡು ಜಾವಿಗೆ ಬತ್ತಿಯೊಡನೆ ಹೊರಡಲಿ; ಚಕ್ಕಮುಕ್ಕಿ ಕಲ್ಲಿನ ತುಪಾಕಿಯವರು ತಮ್ಮ ಆಯುಧ ಸಲಕರಣ ಸಮೇತ ತೆರಳಲಿ; ಸಿಂಗಾಡಿ ಬಿಲ್ಲಿನವರೂ,

ದಟ್ಟೀ ಬಿಲ್ಲಿನವರೂ, ಕೈ ಅಂಬಿನವರೂ, ಈಟಿಯುವರೂ, ಭರ್ಜಿಯುವರೂ ಮುಂದೆ ನಡೆಯಲಿ; ಪಟ್ಟಾ ಕತ್ತಿಯುವರು ಸಂಗಡ ಇರಲಿ; ಕಠಾರಿಯುವರೂ ಕೈ ಭಾಕಿನವರೂ, ಗುಪ್ತಿಯುವರೂ, ಬಡಿಗೋಲಿನವರೂ, ಹಣೆ ಮಟ್ಟದ ದೊಣ್ಣೆಯುವರೂ, ಸಿದ್ಧವಾಗಲಿ; ಬಗೆಬಗೇ ಬಲೆಯುವರು ಹೊರಟು ಅನುಕೂಲವಾದ ಸ್ಥಳಗಳನ್ನು ನೋಡಿಕೊಂಡಿರಲಿ; ಬೇಟೆ ನಾಯಿಗಳವರೂ ಗಿಡಗನವರೂ ಮುಂದೆ ಮುಂದೆ ಹೋಗುತಿರಲಿ; ಕಾಮಾಟ ಚೆಂಗೊಲಿಗಳು ಸಹಾ ಅವರವರ ಸದ್ಧಿವಾಲರ ಸಮೇತ ಸಮಯ ಬಿದ್ದ ಹಾಗೆ ಕೆಲಸ ಮಾಡಲು ಬರುತಿರಲಿ; ಮಿಕ್ಕ ಸಲಕರಣಗಳೆಲ್ಲಾ ವಾಡಿಕೇ ಪ್ರಕಾರ ಹೊರಡಲಿ. ಹೀಗೆ ಮಂತ್ರಿಯು ಅಪ್ಪಣೆ ಕೊಟ್ಟು ತಾನು ಸಿದ್ಧವಾದನು.

ಮರುದಿವಸ ಬೆಳಗಿನ ಜಾವದಲ್ಲಿ ದೊರೆಯೂ ಮಂತ್ರಿಯೂ ತಂತಮ್ಮ ಕುದುರೆಗಳನ್ನೇರಿಕೊಂಡು ಕಾಡಿಗೆ ಹೊರಟರು. ಇವರೆಲ್ಲಾ ವಿಶೇಷವಾಗಿ ಆತುರರಾಗಿ ಸಿಕ್ಕಿದ ಮೃಗಗಳನ್ನು ಹೊಡೆಯುತಾ, ಬಲೆಯನ್ನು ಬೀಸಿ ಕೆಲವನ್ನೂ ಹಿಡಿಯುತಾ, ಹೊದರಿನಲ್ಲಿ ಹೊಕ್ಕವುಗಳನ್ನೂ ಜಳವೆಗಳಿಂದ ಬಡಿದು ಓಡಿಸುತಾ, ಮನಸ್ಸು ಬಂದ ಹಾಗೆ ಗದ್ದಲ ಮಾಡುತಾ ಹೋಗುತಿದ್ದರು. ದೊರೆಯು ಅಲ್ಲಲ್ಲಿ ಸಿಕ್ಕಿದ ಮೃಗಗಳಲ್ಲಿ ಕೆಲವನ್ನು ಹೊಡೆಯುತಾ ಸಿಕ್ಕದೇ ಹೋದ ಮೃಗಗಳನ್ನು ಹರಿಸಿಕೊಂಡು ಹೋಗುತಾ ಆನಂದವಾಗಿ ಬೇಟೆಯಾಡಿಕೊಂಡು ಹೋಗುತಿರುವಾಗ, ವಿಚಿತ್ರವಾದ ಬಂಣ ಉಳ್ಳ ಒಂದು ಜಿಂಕೇ ರೂಪದ ಮೃಗವು ಕಣ್ಣಿಗೆ ಬಿತ್ತು. ದೊರೆ

ಯು ಅದನ್ನು ಹರಿಸಿಕೊಂಡು ಹೊರಟನು. ಆ ಮೃಗವು ಮುಂ
ಮುಂದೆ ಓಡಿಹೋದ ಹಾಗೆಲ್ಲಾ ಅರಸನ ಕುದುರೆಯೂ ಅದ
ಹಿಂದೆಯೇ ಓಡುವುದಕ್ಕೆ ಮೊದಲು ಮಾಡಿತು. ಬೈಲು ಕಾಡ
ಮುಳ್ಳು ಪೊದೆ, ಹೊದರು, ಕಲ್ಲು ಬಂಡೆ, ಹಳ್ಳ ಕೊಳ್ಳ, ತಿಟ
ಗುಡ್ಡ ಇವೇ ಮೊದಲಾಗಿ ಮನುಷ್ಯನೂ ಕುದುರೆಯೂ ಪ್ರವೇ
ಮಾಡುವುದಕ್ಕೆ ದುಸ್ತರವಾದ ಕಡೆಗಳಲ್ಲೆಲ್ಲಾ ಅದು ಓಡಿಹೋ
ಯಿತು. ಅದರ ಹಿಂದೆ ಹಿಂದೆಯೇ ದೊರೆಯ ಕುದುರೆಯು
ಹೊರಟಿತು. ಕೈಗೆ ಸಿಕ್ಕಿದಂತಾಗುವುದು ತಪ್ಪಿಸಿಕೊಂಡು ಹೋಗು
ವುದು, ಕಂಣಿಗೆ ಕಾಣಿಸಿದಂತಾಗುವುದು, ಆಕ್ಷಣದಲ್ಲಿಯೇ ಮಾಯ
ವಾಗುವುದು, ಒಂದೊಂದು ಕಡೆಯಲ್ಲಿ ವಿಚಿತ್ರವಾಗಿ ಕೂಗುವುದು
ಆ ಕೂಗನ್ನು ಹಿಡಿದು ಆ ದಿಕ್ಕಿಗೇ ಹೋದರೆ ಅಲ್ಲಿ ಏನೂ ಇರಬಾ
ರದು: ಹೀಗೆ ಆ ಮೃಗವು ದೊರೆಯನ್ನು ಬಹಳವಾಗಿ ಪೇಚಾಡಿಸಿ
ತೇ ಹೊರತು ಅವನ ಪೆಟ್ಟಿಗೆ ಸಿಕ್ಕಲೇ ಇಲ್ಲ; ಕಡೆಗೆ ಕಂಣಿಗೆ
ಕಾಣದ ಹಾಗೆ ಎಲ್ಲಿಯೋ ತಪ್ಪಿಸಿಕೊಂಡು ಓಡಿಹೋಯಿತು.
ಬೇಟೆಗಾರರ ದಂಡೆಲ್ಲಾ ಹಿಂದೆ ನಿಂತು ಹೋಯಿತು. ದೊರೇ
ಕುದುರೆಯ ವೇಗಕ್ಕೆ ಯಾರೂ ಓಡಲಾರದೇ ಹೋದರು. ಅರಸ
ಒಂದು ಕಡೆ, ಆಳು ಒಂದು ಕಡೆ ಆಯಿತು. ದಣಿವು ಹೆಚ್ಚಾಯಿತು.
ಕುದುರೆ ಓಡಲಾರದೆ ತಟ್ಟಾಯಿತು. ಬಿಸಲಿನ ವೇಗ ಒಂದು
ಕಡೆ, ದೇಹದ ಅಯಾಸ ಒಂದು ಕಡೆ, ಹಸಿವು ಬಾಯಾರಿಕೆಯಿಂದ
ಉಂಟಾದ ಸಂಕಟ ಒಂದು ಕಡೆ, ಇದೆಲ್ಲಕ್ಕಿಂತಲೂ ಹೆಚ್ಚಾಗಿ
ಹರಿಸಿಕೊಂಡು ಹೋದ ಮೃಗವು ಕೈಗೆ ಸಿಕ್ಕಲಿಲ್ಲವಲ್ಲಾ ಎಂಬ

ಔತ್ಸುಕ್ಯದೊಡನೆ ಕೂಡಿದ ವ್ಯಸನ ಒಂದು ಕಡೆ, ಇದೆಲ್ಲಾ ಸೇರಿ ದೊರೆಯನ್ನು ಕಂಗೆಡಿಸಿತು. ದಿಕ್ಕೇ ತೋರಲಿಲ್ಲ. ಹಿಂತಿರುಗಿ ನೋಡಿದ, ಮಂತ್ರಿಯ ಕುದುರೆ ಮಾತ್ರ ದೂರದಲ್ಲಿ ಓಡಿಬರುತಿತ್ತು. ಸ್ವಲ್ಪ ಧೈರ್ಯವಾಯಿತು. ಮಂತ್ರಿಯು ಬಹು ಆಯಾಸಪಟ್ಟು ಸಮೀಪಕ್ಕೆ ಬಂದು ಸೇರಿದನು. ಆಗ ರಾಜನು—ಏನೈ ವೀರಸಿಂಹ, ನಾನು ಅಟ್ಟಿಸಿಕೊಂಡು ಬರುತಾ ಇದ್ದ ಮೃಗವು ಕಡೆಗೂ ತಪ್ಪಿಸಿಕೊಂಡು ಹೋಗಿಬಿಟ್ಟಿತಲ್ಲಾ! ನನಗೆ ಬಹಳ ಆಯಾಸವಾಯಿತು, ಆದಾಗ್ಯೂ ಅದು ನಮ್ಮ ಗುರಿಗೆ ಸಿಕ್ಕಿದ್ದರೆ ಇದೆಲ್ಲಾ ಪರಿಹಾರವಾಗುತಿತ್ತು. ನನಗೆ ತುಟಿ ಬಾಯಿ ಎಲ್ಲಾ ಒಣಗಿ ಹೋಗಿದೆ, ಎಲ್ಲಿಯಾದರೂ ಸ್ವಲ್ಪ ನೀರನ್ನು ಸಂಪಾದಿಸಲಾರೆಯ? ಮೊದಲು ದಣುವನ್ನಾರಿಸಿಕೊಂಡು ಆಮೇಲೆ ಉಳಿದ ಮಾತನ್ನಾಡೋಣ, ಎಂದನು. ಆಗ ಮಂತ್ರಿಯು—ಬುದ್ಧಿ ನಮ್ಮ ಚಾರರೆಲ್ಲಾ ಹಿಂದೆ ದೂರವಾಗಿ ಆಯಾಸದಿಂದ ನಿಂತು ಹೋದರು, ಎಲ್ಲಿದಾರೆಯೋ ಗೊತ್ತಿಲ್ಲ, ಎಂದು ಅರಿಕೆಮಾಡಿ, ಒಂದು ಮರದ ನೆರಳಲ್ಲಿ ಕಾಡುಗಿಡದ ಎಲೆಯನ್ನು ಕಿತ್ತುಹಾಕಿ ಅಲ್ಲಿ ಅರಸನನ್ನು ಕೂರಿಸಿ, ತಾನು ಅತ್ತಿತ್ತ ಹೊರಟು ಹೋಗಿ ಒಂದು ಹಳ್ಳದಲ್ಲಿ ಸ್ವಲ್ಪ ನೀರು ನಿಂತಿರುವುದನ್ನು ಕಂಡು ಮೊದಲು ತನ್ನ ದಣುವನ್ನು ಆರಿಸಿಕೊಂಡು, ಸಮೀಪದಲ್ಲಿದ್ದ ಅಗಲಗಲವಾದ ಮುತ್ತುಗದ ಗಂಡೆಲೆಯನ್ನು ಕಿತ್ತು ಅದರಲ್ಲಿ ದೊನ್ನೇಕಟ್ಟಿ ನೀರನ್ನು ಅದರಲ್ಲಿ ತುಂಬಿಕೊಂಡು ಬಂದು ರಾಜನಿಗೆ ಒಪ್ಪಿಸಿದನು. ಆಗ ಸತ್ಯಗುಪ್ತನು ಆ ಜಲವನ್ನು ಹಿಂಗಿ ಪಿಪಾಸವನ್ನು ಸ್ವಲ್ಪ ಶಮನ ಮಾಡಿಕೊಂಡು ಸುತ್ತಲೂ ನೋಡುತಾ ಕೂತುಕೊಂಡನು.

ಈ ಪ್ರಕಾರ ದೊರೆಯೂ ಮಂತ್ರಿಯೂ ಸೇರಿ ಮರದ
ಳಲ್ಲಿ ಆಯಾಸವನ್ನು ಪರಿಹರಿಸಿಕೊಳ್ಳುತಾ ಕೂತಿರಲಾಗಿ, ದ
ದಲ್ಲಿ ಸ್ವಲ್ಪ ಹೊಗೆ ಎದ್ದ ಹಾಗೆ ಕಾಣಿಸಿತು. ದೊರೆಯು ಅ
ಮಿತ್ರ, ದೂರದಲ್ಲಿ ಹೊಗೆಯಾಡುವ ಹಾಗೆ ಕಾಣುತಿದೆ, ಅಲ್ಲಿ
ಹೋಗಿ ನಮ್ಮೂರಿಗೆ ದಾರಿಯನ್ನಾದರೂ ವಿಚಾರಿಸಿಕೊಳ್ಳೋ
ಎಂದು ಕೊಳ್ಳುತಾ ಇರುವಾಗ, ಕಾಡು ಬೆರಣಿಯನ್ನು ಅ
ತಂಪು ಯಾರೋ ರಾಶಿ ಹಾಕಿದ್ದ ಹಾಗೆ ಕಾಣಿಸಿತು. ಆಗ ಅ
ಸನು—ಯಾರೋ ಕಾಡು ಬೆರಣಿಯನ್ನು ತಂದು ಅಲ್ಲಿ ಸುರಿದಿದಾ
ಎಂದು ಅಲ್ಲಿ ಸ್ವಲ್ಪ ಹೊತ್ತು ನಿಂತು ಕೊಂಡನು. ಒಬ್ಬ ಹುಡ
ಗಿಯು ಒಂದು ಗೂಡೆಯಲ್ಲಿ ಕಾಡು ಬೆರಣಿಯನ್ನು ತಂದು ಸುರಿದ
ಆ ರಾಶಿಯ ಮುಂದೆ ಒಂದು ದಪ್ಪ ಬೆರಣೀ ಸುಂಟೆಯನ್ನು ಇರಿ
ಅದಕ್ಕೆ ಕೈ ಮುಗಿಯುತಾ, ಪ್ರದಕ್ಷಿಣೆ ನಮಸ್ಕಾರವನ್ನು ಮಾಡುತ
"ಸ್ವಾಮಿ ಕಾಡು ಬೆರಣಿ ದೇವರೆ ನನಗೆ ಒಳ್ಳೇಗಂಡ ದೊರೆಯು
ಹಾಗೆ ಮಾಡು. ನಾನು ಪತಿವ್ರತೆಯಾಗಿರುವ ಹಾಗೆ ಮಾಡ
ಸ್ವಾಮಿ" ಹೀಗೆಂದು ತನ್ನೊಳಗೆ ಪ್ರಾರ್ಥಿಸುತ್ತಿದ್ದಳು. ಅವಳಿ
ಸುಮಾರು ಹದಿನೈದು ಹದಿನಾರು ವರುಷ ವಯಸ್ಸಿರಬಹುದು
ಅವಳು ಬಹು ಸುಂದರಿಯಾಗಿದ್ದಳು. ಆಗ

ದೊರೆ—ಅಯ್ಯಾ, ಮಿತ್ರ, ಈ ಹುಡುಗಿ ಬಹು ಸುಂದರಿಯಾಗಿ
ದಾಳೆ. ಈ ಹಾಳ ಕನ್ನಪ್ಪನ ಕಾಡಿನಲ್ಲಿ ಇಂಥಾ ರೂಪುಳ್ಳ
ಸ್ತ್ರೀ ಒಂಟಿಯಾಗಿ ಓಡಿಯಾಡುವುದು ಆಶ್ಚರ್ಯ; ಇವಳೇನು
ಅಪ್ಸರಸ್ತ್ರೀಯೆ, ವನದೇವತೆಯೆ, ರಾಜಕುಮಾರಿಯೆ, ಇಲ್ಲ

ಇದೇನಾದರೂ ಕಂಣಕಟ್ಟು ಮಾಯವೆ?

ಮಂತ್ರಿ—ನಾನು ಅಪ್ಪಣೆಯಾದರೆ ವಿಚಾರಮಾಡುತೇನೆ.

ದೊರೆ—ವಿಚಾರಿಸ್ಸೈ, ನನ್ನ ಮನಸ್ಸು ಬಹುವಾಗಿ ಕಳವಳಗೊಂಡಿದೆ. ಆ ಕನ್ನೆಯ ಮೇಲೆ ನನ್ನ ದೃಷ್ಟಿ ಬಿದ್ದಕ್ಷಣದಲ್ಲಿಯೇ ನನ್ನ ಬಲಗಂಣ ರಪ್ಪೆಯೂ ಬಲಭುಜವೂ ಅದರುವುದಕ್ಕೆ ಆರಂಭವಾಯಿತು. ನಮ್ಮ ಪಟ್ಟಮಹಿಷಿಯರಿಬ್ಬರ ಹೊಟ್ಟೆಯಲ್ಲಿಯೂ ಇದುವರೆಗೆ ಮಕ್ಕಳಾಗಲಿಲ್ಲ. ಅವರ ಸ್ಥಿತಿಯನ್ನು ನೋಡಲಾಗಿ, ಅವರಿಂದ ಸಂತಾನವಾಗಿ ರಾಜ್ಯಕ್ಕೆ ದಿಕ್ಕಾಗುವ ಸಂಭವ ಕಾಣಿಸಲಿಲ್ಲ. ನನ್ನ ಬಲಗೈ ಮಣಿಕಟ್ಟನಲ್ಲಿ ಮೂರು ಕಂಕಣದ ಗೀರು ಇದೆ ಎಂದು ಸಾಮುದ್ರಿಕಾ ಲಕ್ಷಣಜ್ಞರು ಹಿಂದಕ್ಕೆ ಹೇಳಿದ್ದರು. ಜಾತಕವೂ ಅದಕ್ಕೆ ಅನುಸಾರವಾಗಿದೆಯಂತೆ.

ಮಂತ್ರಿ—ಅಗತ್ಯವಾಗಿ ಆಗಲಿ ಮಹಾಸ್ವಾಮಿ. ಸ್ವಾಮಿ ಸುಖವಾಗಿದ್ದರೆ ರಾಜ್ಯವೆಲ್ಲಾ ಆನಂದಪಡುವುದು.

ಈ ಪ್ರಕಾರ ದೊರೆಗೆ ಅರಿಕೇ ಮಾಡಿ ದೂರದಲ್ಲಿ ಕಾಡು ಬೆರಣಿಯನ್ನು ಆರಿಸುತಿದ್ದ ಕನ್ನಿಕೆ ಇದ್ದೆಡೆಗೆ ಹೋಗಿ,

ಮಂತ್ರಿ—ಎಲಮ್ಮ, ನೀನು ಯಾವವೂರು?

ಕನ್ನಿಕೆ—ನಮ್ಮೂರು ಅರಸನಪಾಳಯ.

ಮಂತ್ರಿ—ಇಲ್ಲಿಗೆ ಊರು ಎಷ್ಟು ದೂರದಲ್ಲಿದೆ, ನೀವು ಯಾವ ಜಾತಿಯವರು, ಯಾರ ಮಗಳು, ನಿನಗೆ ಮದುವೆಯಾಗಿದೆಯೊ, ನಿನ್ನ ಪೂರ್ವೋತ್ತರವೇನು? ಈ ಹಾಳಕಾಡಿನಲ್ಲಿ

ಒಂಟಿಯಾಗಿ ಓಡಿಯಾಡಲು ಕಾರಣವೇನು ?

ಕನ್ನಿಕೆ—ಸ್ವಾಮಿ, ನಮ್ಮೂರು ಇಲ್ಲಿಗೆ ಕೊಂಬಿನ ಕೂಗುದ ಇರಬಹುದು. ನಾವು ಕ್ಷತ್ರಿಯರು. ಆ ವೂರಲ್ಲಿರುವ ಪ ಯೆಲ್ಲಾ ನಮ್ಮ ಜಾತಿಯವರದೇ. ನಮ್ಮ ತಂದೆ ಕೇವ ಬಡವ, ನಮ್ಮ ತಾಯಿ ತೀರಿಹೋಗಿ ಹತ್ತು ವರುಷ ಯಿತು. ಇನ್ನೂ ಎರಡು ಸಣ್ಣ ಮಕ್ಕಳನ್ನು ಬಿಟ್ಟು ಹೋ ದಳು. ಎಲ್ಲರನ್ನೂ ನಮ್ಮ ಹೆತ್ತಮ್ಮ ಸಾಕುತಿದಾ ನಮ್ಮ ಅಪ್ಪಾಜಿಗೆ ಒಂದು ಹೊಲವಿದೆ. ಅದರ ಬೇಸಾ ಮಾಡಿಕೊಂಡಿದಾರೆ. ಅದರಿಂದ ಜೀವನವಾಗುವುದಿಲ್ಲ. ಕಾಡುಬೆರಣಿಯನ್ನು ಆರಿಸಿಕೊಂಡು ಹೋಗಿ ಮಾರಿಕೊಂ ಹಾಗೂ ಹೀಗೂ ಸಾಯದ ಗಂಜಿ ಬೇಯದ ಕೂಳು ತಿಂದ ಕೊಂಡು, ಜೀವಿಸುತಿದೇವೆ.

ಮಂತ್ರಿ—ಎಲಮ್ಮ ನೀನು ಹೇಳಿದ್ದನ್ನು ಕೇಳುವುದಕ್ಕೆ ವ್ಯಸ ವಾಗುವುದು. ನಿನಗೆ ಮದುವೆಯಾಗಿದೆಯೆ ?

ಕನ್ನಿಕೆ—ನಮ್ಮಂಥಾ ಬಡವರಿಗೆ ಮದುವೆಯಾಗುವುದು ಹೇ ಅಯ್ಯಾಜಿ, ಯಾರುತಾನೇ ನನ್ನನ್ನು ತಂದುಕೊಂಡಾರು

ಮಂತ್ರಿ—ಯಾರಾವರೂ ತಂದು ಕೊಂಡರೆ ಮದುವೆಯಾದೀಯ

ಕನ್ನಿಕೆ—ಈ ಮಾತಿಗೆ ನಾನು ಹೇಗೆ ಉತ್ತರ ಹೇಳಲಿ. ನಮ್ಮ ಪ್ಪಾಜಿ, ನಮ್ಮ ಹೆತ್ತಮ್ಮ ಅವರನ್ನು ಕೇಳಬೇಕು. ಹುಡುಗಿ ಯಾದ ನನ್ನನ್ನು ಕೇಳಿದರೆ ಏನ ಹೇಳಲಿ ?

ಮಂತ್ರಿ—ಅಕೋ ಆ ಮರದ ಕೆಳಗೆ ದೂರವಾಗಿ ಕೂತಿರುವವರ

ಈ ದೇಶದ ದೊರೆ. ಅವರನ್ನು ನೀನು ಮದುವೆಯಾಗು ತೀಯ?

ಕನ್ನಿಕೆ—ನಾನು ಯಾವ ಮಾತಿಗೂ ಉತ್ತರ ಹೇಳಲಾರೆ. ನಮ್ಮ ಹಿರಿಯರನ್ನು ಕೇಳಬೇಕು. ಇದೆಲ್ಲಾ ದೊಡ್ಡಮಾತಾ ಯಿತು. ನಾನು ಏನೆಂದು ಹೇಳಿಯೇನು?

ಮಂತ್ರಿ—ಹಾಗಾದರೆ ನಿಮ್ಮಪ್ಪಾಜಿ ಎಲ್ಲಿದಾರೆ ತೋರಿಸು.

ಕನ್ನಿಕೆ—ನಾನು ಕಾಡು ಬೆರಣಿಯನ್ನು ಆರಿಸಿ ಹೊತ್ತುಕೊಂಡು ಹೋಗಬೇಕು. ಈ ಕೆಲಸವನ್ನು ಬಿಟ್ಟು ಹಾಗೆಯೇ ಹೋ ದರೆ ನಮ್ಮ ಹೆತ್ತಮ್ಮಯ್ಯ ಸುಮ್ಮನಿರುವುದಿಲ್ಲ.

ಮಂತ್ರಿ—ನಿನ್ನನ್ನು ನಾನು ಬಲವಂತವಾಗಿ ಕರೆದು ತಂದೆ ಎಂದು ಅವರಲ್ಲಿ ಹೇಳುತೇನೆ. ನಿನ್ನಮೇಲೆ ಮಾತುಬಾರದ ಹಾಗೆ ಮಾಡುತೇನೆ. ನೀನು ಚಿಂತಿಸಬೇಡ.

ಈ ಪ್ರಕಾರ ಆ ಮಂತ್ರಿಯು ಆ ಹುಡುಗಿಯನ್ನು ಒಡಂ ಬಡಿಸಿ ಬಲವಂತ ಮಾಡಲು, ಅವಳು ಆತನನ್ನು ಕರೆದುಕೊಂಡು ತಮ್ಮೂರಿಗೆ ಹೋಗಿ ಮನೆಸೇರಿದಳು. ಇವಳನ್ನು ಕಂಡಕೂಡಲೆ ಹೆತ್ತಮ್ಮನಾದ ಕೆಂಚಮ್ಮಾಜಿಯು—ಚೆಲುವಾಜಿ, ಬೆರಣೀ ಆರಿಸಿ ಕೊಂಡು ಬಂದೆಯಾ, ಸುಮ್ಮನೆ ಬರೀಕೈಯಲ್ಲಿ ಯಾಕೆ ಬಂದೆ. ರಾತ್ರಿಯಾತರಲ್ಲಿ ಒಲೆ ಹತ್ತಿಸಲಿ? ಒಂದು ಚೂರು ಬೆರಣಿ ಇಲ್ಲ ವಲ್ಲಾ, ಎಂದು ಗದರಿಸಿದಳು. ಅಗ ಆ ಕನ್ನೆಯು—ಹೆತ್ತಮ್ಮಯ್ಯ, ಕಾಡಿನಲ್ಲಿ ಆರಿಸಿ ಬೆರಣೀರಾಸಿ ಹಾಕಿದೇನೆ. ಯಾರೋ ದೊಡ್ಡ ವರು ಬಂದು—ನಿಮ್ಮ ಮನೆಯನ್ನು ತೋರಿಸು, ನಿಮ್ಮ ಹಿರಿಯರಲ್ಲಿ

ಮಾತನಾಡಬೇಕು, ಎಂದು ನನ್ನನ್ನು ಕರೆದುತಂದರು, ನಾನು ಬಂದೆ

ಕೆಂಚಾಜಿ—ಅವನು ಯಾರು ನಿನ್ನನ್ನು ಕರೆದು ತಂದವ?

ಚೆಲುವಾಜಿ—ಅಯ್ಯೋ, ಕೂಗಬೇಡಿ ಹೆತ್ತಮ್ಮಯ್ಯ, ಅವರು ನಮ್ಮ ಮನೇ ಬಾಗಿಲಲ್ಲಿಯೇ ನಿಂತಿದಾರೆ.

ಕೆಂಚಾಜಿ—ಆದು ಯಾರಪ್ಪ, ಒಳಕ್ಕೆ ಬನ್ನಿ, ಎನ್ನುತಾ ಆ ಮುದು ಕಿಯು ಒಳಗಿನಿಂದ ಹಟ್ಟಗೆ ಬಂದಳು. ಬೀದೀಬಾಗಿಲಲ್ಲಿ ಒಳ್ಳೇ ಉಡುಪನ್ನು ಧರಿಸಿಕೊಂಡು ಆಜಾನು ಬಾಹುವಾಗಿ ನೋಡುವುದಕ್ಕೆ ದೊಡ್ಡ ಪದವಿಯಲ್ಲಿರುವ ಪುರುಷನಂತೆ ಕಾಣುವ ಒಬ್ಬ ಮನುಷ್ಯನು ನಿಂತುಕೊಂಡಿದ್ದದನ್ನು ಕಂಡು ಸ್ವಲ್ಪಗಾಬರಿಯಾದಳು; ಕೂಡಲೆ ಆತನನ್ನು ನೋಡಿ— ಅಯ್ಯಾಜಿ ನೀವು ಯಾರು, ಎಲ್ಲಿಂದ ಬಂದಿರಿ, ಮತ್ತೆ ಯಾವ ಕಾರ್ಯದಮೇಲೆ? ಎಂದಳು.

ಮಂತ್ರಿ—ತಾಯಿ, ಆ ಹೆಂಣುಮಗಳನ್ನು ನಾನು ಕರೆದು ತಂದೆ, ಮೊಮ್ಮಗಳ ಮೇಲೆ ಕೋಪಮಾಡಬೇಡಿ. ನಾನು ಕನ್ಯಾರ್ಥಿ ಯಾಗಿ ಬಂದೆ.

ಕೆಂಚಾಜಿ—ನಾವು ಬಡವರು, ತಮ್ಮಂಥವರು ದಯಮಾಡಿದರೆ ಕೂತುಕೊಳ್ಳುವುದಕ್ಕೆ ಕೂಡ ನಮ್ಮ ಮನೆಯಲ್ಲಿ ಸ್ಥಳ ಸಂಕೋಚವಾಗಿದೆ. ಈ ಮಣೆಯ ಮೇಲೆ ದಯಮಾಡಿ. ಯಾವ ಕನ್ಯವನ್ನು ಯಾರಿಗೋಸ್ಕರ ಕೇಳುವುದಕ್ಕೆ ದಯ ಮಾಡಿದಿರಿ?

ಮಂತ್ರಿ—ತಮ್ಮ ಮೊಮ್ಮಗಳಾದ ಈ ಕನ್ನೆಯನ್ನೇ ಕೇಳುವ ಕಾರ್ಯದ

ಮೇಲೆ ಬಂದೆ, ಒಳ್ಳೇ ಮಹಾಪದವಿಯಲ್ಲಿರತಕ್ಕ ಒಬ್ಬರಿ ಗೋಸ್ಕರ.

ಕೆಂಚಾಜಿ—ಅವರು ಯಾರೋ ನೀವುಯಾರೋ ನಾವು ಕಾಣೆವು. ನಮ್ಮ ಹುಡುಗಿಗೆ ೧೬ ವರುಷ, ಅವಳಿಗೆ ಮದುವೆಯಾಗ ಬೇಕಾದ್ದೇನೋ ನಿಜ. ಆದರೆ ನಾವು ಜಾತಿಯಲ್ಲಿ ಅರಸು ಮಕ್ಕಳು. ನಾವು ಇತರ ಜಾತಿಯವರಿಗೆ ಹೆಂಣನ್ನು ಕೊಡು ವುದಿಲ್ಲ.

ಮಂತ್ರಿ—ಅರಸು ಮಕ್ಕಳಿಗೋಸ್ಕರವೇ ನಾನು ಹೆಂಣಕೇಳ ಬಂದೆ. ಹಾಗೆ ನೀವು ಇತರ ಜಾತಿಯುವರಲ್ಲಿ ಸಂಬಂಧ ಬೆಳೆಯಿಸ ತಕ್ಕವರೆಂದು ತಿಳಿದಿದ್ದರೆ ನಾನು ಇಷ್ಟು ದೂರ ಬರುತಿರಲಿಲ್ಲ.

ಕೆಂಚಾಜಿ—ವರಯಾರೋ ಗೊತ್ತಿಲ್ಲ. ಆತನಿಗೆ ವಯಸ್ಸು ಎಷ್ಟು ಯಾವ ವೂರು, ಆಸ್ತಿ ಪಾಸ್ತಿ ಏನಿದೆ, ಅವರ ಮನೆತನ ಎಂಥಾದ್ದು, ಅವರ ಮನೇವಾಹಿನಿ ಎಂಥಾದ್ದು, ಹುಡುಗ ನೋಡುವುದಕ್ಕೆ ಲಕ್ಷಣವಾಗಿದಾನೆಯೆ, ಇದು ಯಾವು ದನ್ನೂ ಅರಿಯದೆ ಖಂಡಿತವಾಗಿ ಯಾವ ಮಾತನ್ನು ತಾನೆ ಆಡುವುದಕ್ಕೆ ಹೇಗೆ ಅನುಕೂಲಿಸೀತು ? ಜಾತಕ ಅನುಕೂ ಲಿಸುವ ಮಾತು ಬೇರೆ ಇದೆ. ಇದೂ ಅಲ್ಲದೆ ನನ್ನ ಮಗ ಹೊಲದ ಕಡೆಗೆ ಹೋಗಿದಾನೆ. ಅವನು ಬಂದು ಮಾತ ನಾಡಬೇಕು.

ಮಂತ್ರಿ—ಅಮ್ಮಯ್ಯ, ನಿಮ್ಮಲ್ಲಿ ವಂಚನೆಯೇಕೆ ? ವರನನ್ನು ಅನೇಕವೇಳೆ ತಾವು ನೋಡಿರಬಹುದಾದ ಪುರುಷರೇ, ಈ

ರಾಜ್ಯವೆಲ್ಲಾ ಅವರ ಆಸ್ತಿಯಾಗಿದೆ, ದೊರೆತನಮಾಡತಕ
ಮನೆತನ, ಅವರಿಗೆ ೩೩ ವರುಷ ವಯಸ್ಸು, ಅವರ ರೂ
ಲಾವಣ್ಯವೆಲ್ಲಾ ನೀವು ಕಂಡದ್ದೇ.

ಕೆಂಚಾಜಿ—ನೀವು ಹೇಳುವುದು ನೋಡಿದರೆ ಯಾರೋ ದೊ
ಮಕ್ಕಳು ಎಂದು ತೋರುತಿದೆಯಲ್ಲಾ.

ಮಂತ್ರಿ—ದೊರೆ ಮಕ್ಕಳಲ್ಲ, ದೊರೆಗಳೇ.

ಕೆಂಚಾಜಿ—ಆಹಾ, ನಮ್ಮ ಬಡತನಕ್ಕೂ ದೊರೆತನಕ್ಕೂ ಎಲ್ಲಿಂ
ಎಲ್ಲಿಗೆ? ದೊರೆಗಳಿಗೆ ಪುನಃ ಮದುವೆಯಾಕೆ? ಇಬ್ಬ
ಪಟ್ಟಮಹಿಷಿಯರು ಇದಾರೆಯಷ್ಟೆ?

ಮಂತ್ರಿ—ಮಹಿಷಿಯರು ಇದಾರೆ. ಅವರಿಗೆ ಮಕ್ಕಳಾಗಲಿಲ್ಲ
ಅವರಿಗೆ ಇದು ಒಂದು ಚಿಂತೆಯಾಗಿದೆ. ಇದಕ್ಕೋಸ್ಕರವೆ
ನಿಮ್ಮ ಮೊಮ್ಮಗಳ ಪಾಣಿಗ್ರಹಣ ಮಾಡಬೇಕೆಂದು ಅಪೇಕ್ಷೆ
ಹುಟ್ಟಿದೆ.

ಕೆಂಚಾಜಿ—ನನಗೆ ಈ ವಿಚಾರವೆಲ್ಲಾ ಗೊತ್ತಾಗುವುದಿಲ್ಲ, ನನ್ನ
ಮಗ ಬರಬೇಕು.

ಇವರಿಬ್ಬರಿಗೂ ಹೀಗೆ ಸಂಭಾಷಣೆ ಜರುಗುತಾ ಇರುವಾಗ
ರಾಮಪ್ಪಾಜಿಯು ಮನೆಗೆ ಬಂದನು. ಆಗ ಅವನನ್ನು ಕುರಿತು

ಕೆಂಚಾಜಿ—ಅಪ್ಪಾಜಿ, ನಿಮ್ಮ ಮಗಳನ್ನು ದೊರೆಗಳಿಗೆ ಕೊಡ
ಎಂದು ಇವರು ಕನ್ಯಾರ್ಥಿಯಾಗಿ ಬಂದಿದಾರೆ.

ರಾಮಪ್ಪಾಜಿ—ದೊರೆಗಳಿಗೆ ನನ್ನ ಮಗಳನ್ನು ಕೊಡೆಂದು ಕೇಳ
ತಕ್ಕದ್ದು ಆಶ್ಚರ್ಯವಾಗಿದೆ, ಅವರ ಪದವಿ ಎಲ್ಲಿ ನಾವೆಲ್ಲಿ?

ಇಷ್ಟರವೇಲೆ ಬ್ರಹ್ಮ ಸಂಘಟನೆ ಇದ್ದರೆ ಆಗಬಹುದು

ಕೆಂಚಾಜಿ—ಸವತಿಯರು ಇಬ್ಬರು ಇರುವಾಗ ಅವರ ಮೇಲೆ ನಾವು ಕನ್ಯಾ ಕೊಡುವುದು ಹೇಗೆ? ಒಂದು ವೇಳೆ ಈಗ ನಮ್ಮ ಹುಡುಗಿಯಲ್ಲಿ ಪ್ರೀತಿಹುಟ್ಟಬಹುದು. ಅದರೆ ದೊರೆತನ ಮಾಡತಕ್ಕವರ ಮನಸ್ಸನ್ನು ಕಂಡವರು ಯಾರು? ಇಂದು ಇವಳಲ್ಲಿ ಪ್ರೀತಿ ಹುಟ್ಟಿದ ಹಾಗೆಯೇ ನಾಳೆ ಮತ್ತೊಬ್ಬಳಲ್ಲಿ ಯೂ ಹುಟ್ಟಿದರೆ ನಮ್ಮ ಹುಡುಗಿಯಗತಿಯೇನಾಗಬೇಕು? ಪದವಿಯಲ್ಲಿರತಕ್ಕವರಿಗೆ ಚಾಪಲ್ಯಹೆಚ್ಚು. ಇದೂ ಅಲ್ಲದೆ ನಕ್ಷತ್ರಾನುಕೂಲ್ಯ ಹೇಗಿದೆಯೋ ಗೊತ್ತಿಲ್ಲ. ಅವರಿಗೆ ವಯಸ್ಸು ಎಷ್ಟಾಗಿದೆಯೋ ಯಾರು ಬಲ್ಲರು? ಸುಖವಾಗಿ ಬೆಳೆದ ಶರೀರವಾದ್ದರಿಂದ ವಯಸ್ಸಾಗಿದ್ದರೂ ಕಾಣಿಸದೆ ಇರಬಹುದು.

ಮಂತ್ರಿ—ಸ್ವಯಂವರ ವಿಧಾನದಲ್ಲಿ ಮದುವೆಯಾಗುವಾಗ ನಕ್ಷತ್ರದ ಘಟಿಕಾರ್ಥ ವಿಷಯವನ್ನು ಯೋಚಿಸಬೇಕಾದ ಅಗತ್ಯವಿರುವುದಿಲ್ಲ. ಬೇಟೆಗಾಗಿ ನಾನೂ ದೊರೆಗಳೂ ಕೂಡಲೇ ಬಂದಿದ್ದೆವು. ಅವರು ಆಯಾಸ ಪರಿಹಾರಕ್ಕಾಗಿ ಆ ತಿಟ್ಟನ ಹಿಂದುಗಡೆ ಮರದ ನೆರಳಲ್ಲಿ ಇದಾರೆ, ನೀವು ಬಂದು ನೋಡಬಹುದು. ನಿಂತ ವಿಷಯದಲ್ಲಿ ಅವರ ಉದ್ದಾಮವಾದ ಗುಣಗಳನ್ನು ರಾಜ್ಯವೇ ಹೊಗಳುತಾ ಇದೆ. ರಾಜಾಧಿರಾಜರ ಪದವಿಯಲ್ಲಿರತಕ್ಕವರು ಎರಡು ಮೂರು ಮದುವೆಯಾಗುವುದೇನೂ ಹೊಸದಲ್ಲ. ತಮ್ಮ ಮನೆತನ ಪರಿಶುದ್ಧ

ನಾದ್ದೆಂದು ಕೇಳಿ ಕನ್ಯಾರ್ಥಿಯಾಗಿ ಬಂದೆವಲ್ಲದೆ ಮ
ಮಾಚಬೇಕಾದ ವಿಷಯವೇನೂ ಇಲ್ಲ.

ತಾವು ಶುದ್ಧವಾದ ಕ್ಷತ್ರಿಯರು ಎಂಬ ಹೆಮ್ಮೆ ರಾಮಪ್ಪಾ
ಜಿಗೆ ಯಾವಾಗಲೂ ಇರುತಿತ್ತು. ಮಂತ್ರಿ ಆಡಿದ ಮಾತಿನಿಂದ
ತಮ್ಮ ಕುಲವನ್ನು ಸ್ತೋತ್ರ ಮಾಡಿದ ಧ್ವನಿ ಹೊರಟ ಕಾರಣ
ಅಷ್ಟಕ್ಕೇ ಉಬ್ಬಿದವನಾಗಿ ಮಂತ್ರಿಯನ್ನು ಕುರಿತು ನಗುತಾ—
ನಾವು ಕೇವಲ ಬಡವರು, ನಮ್ಮ ಕುಲದ ಪಾರಿಶುಧ್ಯ ಒಂದುವಿನಾ
ಮತ್ತೆ ಯಾವ ಐಶ್ವರ್ಯವೂ ಇಲ್ಲ; ತಾವು ರಾಜರಲ್ಲಿ ಮಂತ್ರಿಗಳಾ
ಗಿರಬಹುದೆಂದು ಭಾವಿಸುತೇನೆ; ಹಾಗಾದರೆ ರಾಜ್ಯದ ಕ್ಷೇಮ
ಕ್ಕೆಲ್ಲಾ ಬಾಧ್ಯರಾದ ತಾವು ಆ ರಾಜ್ಯದ ಪ್ರಜೆಗಳಲ್ಲಿ ಒಂದು
ಅಣುವಾಗಿ ಸೇರಿಕೊಂಡಿರುವ ನಮ್ಮ ಕ್ಷೇಮಕ್ಕೂ ಹಾಗೆಯೇ
ಭಾಧ್ಯರಾಗಿದ್ದೀರಿ; ತಮ್ಮ ಇಷ್ಟವಿದ್ದಂತೆ ನಡೆದುಕೊಳ್ಳಲು ಸಿದ್ಧ
ವಾಗಿದೇನೆ; ನನ್ನ ಮಗಳ ಪೂರ್ವಾರ್ಜಿತದ ಪುಣ್ಯಫಲವನ್ನು
ನಾವೇನು ಬಲ್ಲೆವು? ಮಹಾರಾಯನ ಕೈ ಹಿಡಿಯುವ ಯೋಗ
ಅವಳಿಗೆ ಇರುವಹಾಗೆ ತೋರುತಿದೆ. ಈ ಪ್ರಕಾರ ರಾಮಪ್ಪಾ
ಜಿಯು ಆಡಿದ ಮಾತನ್ನು ಕೇಳಿ ತನ್ನ ಪ್ರಯತ್ನ ಸಾಗುವುದಲ್ಲಾ
ಎಂದು ಮಂತ್ರಿಗೆ ಬಹಳ ಸಂತೋಷವಾಯಿತು. ಈತನು
ಆಕ್ಷಣದಲ್ಲಿ ದೊರೆ ಕೂತಿದ್ದೆಡೆಗೆ ಹೋಗಿ ಎಲ್ಲಾ ಸಂಗತಿಯನ್ನೂ
ಸವಿಸ್ತಾರವಾಗಿ ಅರಿಕೆ ಮಾಡಿ ರಾಮಪ್ಪಾಜಿ ಮೊದಲಾಗಿ
ವಿಶಿಷ್ಟ ಸಂಸಾರವನ್ನೂ ಕರೆದುಕೊಂಡು ರಾಜಧಾನಿಗೆ
ಹೋದನು. ಕೂಡಲೇ ಒಳ್ಳೇ ಲಗ್ನದಲ್ಲಿ ಬಹು ಅಟ್ಟಹಾಸವಾಗಿ

ದೊರೆಗೂ ಕಾಡುಬೆರಣಿ ಆರಿಸುತ್ತಿದ್ದ ಕನ್ನಿಕೆಗೂ ವಿವಾಹ ಬೆಳೆಯಿತು.

೨ನೇ ಅಧ್ಯಾಯ.

ಒಂದಾನೊಂದು ದಿವಸ ರಾತ್ರೆ ದೊರೆಯು ಈ ಹೊಸ ಬಳಾದ ಮೆಚ್ಚಿನ ಹೆಂಡತಿಯೊಡನೆ ತನ್ನ ಏಕಾಂತ ಗೃಹದಲ್ಲಿ ತಾಂಬೂಲವನ್ನು ಹಾಕಿಕೊಳ್ಳುತಾ ಆನಂದವಾಗಿ ಕೂತುಕೊಂಡು·

ದೊರೆ—ನೀನು ಈಗ ಸುಖವಾಗಿದ್ದೀಯಲ್ಲವೆ? ನಿಮ್ಮ ತಂದೆಯ ಮನೆಯಲ್ಲಿದ್ದ ಕಷ್ಟ ಇಲ್ಲಿಲ್ಲ.

ಚೆಲುವಾಜಿ—ನನಗೆ ಎಲ್ಲಿ ಏನು ಕಷ್ಟ ಏನು ಸುಖ? ನಾವು ಯಾವುದನ್ನು ಹೇಗೆ ತಿಳಿದುಕೊಂಡರೆ ಹಾಗೆ ನಮ್ಮ ಬುದ್ಧಿಗೆ ತೋರುವುದು.

ದೊರೆ—ಅಲ್ಲಿ ಮನೇಕೆಲಸವನ್ನೆಲ್ಲಾ ನೀನು ಮಾಡುತಿದ್ದೆ, ಇಲ್ಲಿ ಅಂಥಾ ಕಷ್ಟವೇನಿದೆ?

ಚೆಲುವಾಜಿ—ಅಲ್ಲಿ ಕೆಲಸ ಮಾಡುತಿದ್ದೆ, ಬಲವಾಗಿದ್ದೆ, ಇಲ್ಲಿ ಕೆಲಸವೇನೂ ಇಲ್ಲ, ತಕ್ಕ ಬಲವೂ ಇಲ್ಲ.

ದೊರೆ—ಹಾಗಾದರೆ ಬಡಜನರಹಾಗೆ ಕೆಲಸಮಾಡಿಕೊಂಡಿರತಕ್ಕ ವರು ಉತ್ತಮರೋ?

ಚೆಲುವಾಜಿ—ಯಾವ ಕೆಲಸವೂ ಬಾರದೆ ಮೈ ಬೆಳೆಯಿಸಿಕೊಂಡು ಕೂತು ಎಲ್ಲಕ್ಕೂ ಇತರರ ಸಹಾಯವನ್ನು ಅಪೇಕ್ಷಿಸತಕ್ಕ

ವರು ಉತ್ತಮರೋ?

ದೊರೆ—ಹಾಗಾದರೆ ನೀನು ಕಾಡುಜನಕ್ಕೆ ಸೇರಿದವಳು.

ಹೀಗೆಂದು **ಹೇಳಿ** ದೊರೆಯು ಆ ದಿವಸದಿಂದ ಈ ಚಿ ಹೆಂಡತಿಯ ಸ್ವಭಾವವನ್ನು ಪರೀಕ್ಷಿಸಬೇಕೆಂದು ತನ್ನ ಮನಸ್ಸಿನ ಯೋಚಿಸಿಕೊಂಡು, ಅವಳ ಸಂಗಡ ಮಾತನಾಡದೆ ಸುಮ್ಮ ಇರಲು ಆರಂಭಿಸಿದನು. ಇದನ್ನು ಚೆಲುವಾಜಿಯು ಕಂ ಓಹೋ! ದೊರೆತನ ಮಾಡತಕ್ಕವರು ಕ್ಷಣಿಕ ಸ್ವಭಾವದಿಂದಕೂ ರುವುದರಿಂದಲೇ ನಮ್ಮ ಹೆತ್ತಮ್ಮ ಕೆಂಚಾಜಿಯು ಮದುವೆ ಮಾ ನಾಡುವಾಗಲೇ ಈ ಸಂಬಂಧವನ್ನು ಕುರಿತು ಅಸಮಾಧಾನವಾ ಮಾತನಾಡಿದರು. ಹೋಕೆಯನ್ನರಿಯದ ನಮ್ಮಪ್ಪಾಜಿಯು ಮಾ ಧಾರಾಳವಾದ ಮನಸ್ಸಿನಿಂದ ಹೆಂಣ ಕೊಡುತೇನೆಂದು ಒಪ್ಪಿ ಕೊಂಡರು. ನಮ್ಮ ಹೆತ್ತಮ್ಮ ಪಟ್ಟ ಅನುಮಾನ ಈಗ ನಿ ಪಾಯಿತು; ಒಳ್ಳೆಯದು, ನಮ್ಮ ಬುದ್ಧಿಯನ್ನು ನಮ್ಮ ಕೈ ಟ್ಟುಕೊಂಡು ಸಮಯಬಂದಹಾಗೆ ನಡೆದುಕೊಳ್ಳಬೇಕೆಂದು ತ ಮನಸ್ಸಿನಲ್ಲಿ ನಿಷ್ಕರ್ಷೆ ಮಾಡಿಕೊಂಡು ಗಂಡನೊಡನೆ ತಾನು ಮಾತನಾಡುವುದನ್ನು ಬಿಟ್ಟುಬಿಟ್ಟಳು. ಇವಳನ್ನು ಇನ್ನೂ ಪರಿ ಕ್ಷಿಸಲು ದೊರೆಯು ಇವಳ ತೊಟ್ಟಿಗೆ ಕೊಡುತಾ ಇದ ಖಾಸಾ ಸೋಬಸ್ಕರವನ್ನು ದಿನಕ್ರಮೇಣ ಕಡಿಮೆ ಮಾಡುತ ಕಡೆಗೆ ಕಗ್ಗಲರಾಗಿ ಮುಗ್ಗಲ ಹುರಳಿಗೆ ಇಳಿಸಿದನು. ಈ ಹುಡ ಗಿಯನ್ನು ಕಡೇ ತೊಟ್ಟಿಗೆ ಕರೆದುಕೊಂಡು ಹೋಗಿ ಅಲ್ಲಿರಿಸಿ ದನು. ಇವಳ ಸೇವೆಗೆ ಒಬ್ಬ ಸುತ್ತುಕೆಲಸದ ಗೌಡಿ ಸಹಿ

ಇಲ್ಲದಂತಾಯಿತು. ಆದರೆ ಚೆಲುವಾಜಿಯು ದಿನದಿನಕ್ಕೆ ತನ್ನ ಸ್ಥಿತಿ ಹೀಗಾದ್ದನ್ನು ಕಂಡು ಹೆದರದೆ ಮನಸ್ಸನ್ನು ಗಟ್ಟಿಮಾಡಿ ಕೊಂಡಳು. ದೊರೆಯ ಅರಮನೆಯಲ್ಲಿ ಕಷೇತೊಟ್ಟಿ ಆದಾಗ್ಯೂ ಅರಸರ ಪಾಳಯದ ಬಡ ಗುಡಿಸಲಿಗಿಂತಲೂ ಉತ್ತಮ ವಾಗಿಯೇ ಕಂಡಿತು. ಕಗ್ಗಲರಾಗಿಯ ಕಲ್ಲುಮಣ್ಣನ್ನು ಮಾಡಿ ಒಳ್ಳೇರಾಗಿಯನ್ನು ತೆಗೆದುಕೊಂಡು ಅದನ್ನು ಬೀಸುವ ಅಭ್ಯಾ ಸವೂ, ಹಿಟ್ಟನ್ನು ಸೈಕವಾಗಿ ಮಾಡಿ ತೊಳಿಸುವ ಅಭ್ಯಾ ಸವೂ, ಸಾಧಾರಣ ಕಾರ ಅರೆದು ಇರಿಸಿಕೊಂಡು ಹಿಟ್ಟಿನ ಮುರುಕನ್ನು ಅದಕ್ಕೆ ಸೋಕಿಸಿ ಗೊಳಕ್ಕನೆ ನುಂಗುವ ಅಭ್ಯಾ ಸವೂ ಇವಳಿಗೆ ಇದ್ದೇಇದ್ದ ಕಾರಣ, ಉದರಭರಣಾರ್ಥವಾಗಿ ತನ್ನ ಹಾಳತಕ್ಕೆ ತಾನು ಮಾಡಿಕೊಳ್ಳಬೇಕಾದ ಕೆಲಸವಾಗಲಿ ಆ ಕೇವಲ ನಿಕೃಷ್ಟವಾದ ಆಹಾರವಾಗಲಿ ಯಾವುದೂ ವಿಶೇಷ ಶ್ರಮವಾಗಿ ಇವಳಿಗೆ ಕಾಣಲಿಲ್ಲ. ಒಳ್ಳೇದು ಇರಲಿ, ಸಮಯ ಬರುತ್ತೆ, ಆಗೆ ನನ್ನ ಸಾಮರ್ಥ್ಯವನ್ನು ತೋರಿಸುತೇನೆ, ಅದು ವರೆಗೂ ಸುಮ್ಮನೆ ಇರೋಣವೆಂದುಕೊಂಡು ಈ ರಾಜಪತ್ನಿಯು ಎಲ್ಲಾ ಕಷ್ಟವನ್ನೂ ಸಹಿಸಿಕೊಂಡು ಸುಮ್ಮನಿರುತ್ತಿದ್ದಳು.

ಹೀಗೆ ಕೆಲವು ಕಾಲ ಕಳೆಯಿತು. ಆದರೆ ದೊರೆಗೆ ಈ ಹೆಂಡತಿಯ ಹಂಬಲು ತಪ್ಪಲಿಲ್ಲ. ನೀನು ಕಾಡುಜನಕ್ಕೆ ಸೇರಿ ದವಳು ಎಂದು ಅನ್ನುವಾಗೆ ಅಂದುಬಿಟ್ಟೆ. ಆ ಹುಡುಗಿಗೆ ಕಷೇ ತೊಟ್ಟಿಯಲ್ಲಿ ಕಗ್ಗಲರಾಗಿ ಮುಗ್ಗಲ ಹುರುಳಿ ಕೊಡಿಸುವ ಮಟ್ಟಿ ಗೂ ಆ ಕೋಪ ಕೊನೆಗಂಡಿತು. ಅದರೆ ಆ ಚಿಕ್ಕಹೆಂಡತಿಯ

ರೂಪುಲಾವಣ್ಯವನ್ನು ಆಗಾಗ್ಯೆ ಜ್ಞಾಪಿಸಿ ಕೊಳ್ಳುತಾ ಕಳಲಿಹೋಗಿ
ತಾನೇ ಬೂದಿಯಾದ ಕೆಂಡದಹಾಗೆ ಶಾಂತವಾಗಿ, ಹೊಸ ಹೆಂಡ
ತಿಯ ಸೌಂದರ್ಯ ಒಂದು ವೇಳೆ, ಅವಳ ವಿನಯ ಸಂಪತ್ತು ಒಂದು
ವೇಳೆ, ಅವಳ ಜಾಣತನ ಚಮತ್ಕಾರೋಕ್ತಿಗಳು ಒಂದುವೇಳೆ,
ಜ್ಞಾಪಕಕ್ಕೆ ಬರುತಾ ಆಗ್ರಹ ಹೋಗಿ ಅಭಿಮಾನ ಹೆಚ್ಚಿ ಕ್ರಮ
ವಾಗಿ ಆವಳನ್ನು ಪೂರ್ವದಂತೆ ಒಲಿಸಿಕೊಳ್ಳಲು ದಾರಿಯನ್ನು ಹುಡು
ಕುತಾ ಬಂದನು. ಮೊದಲು ಕೊಡುತಾ ಇದ್ದ ಕೆಟ್ಟ ಪದಾರ್ಥಕ್ಕೆ
ಬದಲಾಗಿ ಖಾಸಾ ಸೋಬಸ್ಕರವನ್ನು ಕಳುಹಿಸಲು ಮೊದಲಾ
ಯಿತು. ಇಾದು ಕಗ್ಗಲರಾಗಿ ಹೋಗಿ ಒಳ್ಳೇರಾಗಿ ಬಂತು,
ನಾಳೆ ರಾಗಿ ಹೋಗಿ ಅಕ್ಕಿಯಾಯಿತು, ನಾಡಿದ್ದು ತುಪ್ಪ ಬಂತು,
ಇನ್ನೊಂದು ದಿನ ಬೇಳೆ, ಮತ್ತೊಂದು ದಿನ ನೇಲೋಗರ, ಮಗೆ
ದೊಂದು ದಿನ ಸಕ್ಕರೆ, ಗೋಧಿರವೆ, ಪುನಃ ಒಂದು ದಿನ
ಹಾಲು, ಮೊಸರು, ಬಂತು. ತರುವಾಯ ಮಾಡಿದ ಪದಾ
ರ್ಥಗಳನ್ನಿರಿಸಿ ಖಾಸಾ ಎಡೆಯೇ ಬರುವುದಕ್ಕೆ ಆರಂಭವಾಯಿತು.
ಹರಕು ಸೀರೆಗೆ ಬದಲು ಉತ್ತಮವಾದ ರೇಷ್ಮೆ ಸೀರೆಯನ್ನು ತಂದಿರಿ
ಸಿದರು. ಹಾಸಿಗೆ ಹೊದಿಕೆಗಾಗಿ ಹರಕಲ ಚಾಪೆ ಹಳೇ ಕಂಬಳಿ
ಹೋಗಿ ಮಂಚ ಸುಪ್ಪತ್ತಿಗೆ ಮೊದಲಾದ್ದಾಯಿತು. ಇನ್ನೊಂದು
ನಾಲ್ಕು ದಿವಸವಾದ ಮೇಲೆ ಉಪಚಾರಕ್ಕೂ ಕೆಲಸಕ್ಕೂ ಇಬ್ಬರು
ಗೌಡಿಯರು ಬಂದರು. ತರುವಾಯ ಚೆಲುವಾಜಿಯ ಒಡವೇ
ಪೆಟ್ಟಿಗೆಯೂ ಬಂತು. ಏನು ಬರಲಿ ಯಾರು ಬರಲಿ ಚೆಲುವಾ
ಜಿಯು ಯಾವುದನ್ನೂ ಉಪಯೋಗಿಸಿ ಕೊಳ್ಳದೆ ಮೊದಲು ತಾನು

ಕಡೇ ತೊಟ್ಟಿಗೆ ಬಂದಾಗ ಯಾವ ಸ್ಥಿತಿ ಇತ್ತೊ ಅದನ್ನು ಬದಲಾಯಿಸಿಕೊಳ್ಳದೆ ತನ್ನ ಬಡತನದ ಬಾಳನ್ನೇ ಬಾಳಿಕೊಂಡು ಬಂದದ್ದಕ್ಕೆ ಉಬ್ಬದೆ ಹೋದ್ದಕ್ಕೆ ತಗ್ಗದೆ ಸಂತೋಷಚಿತ್ತಳಾಗಿಯೇ ಇರುವಳಂತೆ ಇದ್ದಳು. ಇವಳ ಸೇವೆಗೆ ಬಂದಿದ್ದ ಗೌಡಿಯರು ದಿನಚರಿಯಲ್ಲಿಯೂ ಅಲ್ಲಿ ನಡೆದದ್ದನ್ನೆಲ್ಲಾ ಕೊಂಡು ಹೋಗಿ ಒಬ್ಬಳು ತಪ್ಪ ಒಬ್ಬಳು ದೊರೆಗೆ ರಹಸ್ಯವಾಗಿ ವರದಿ ಹೇಳುತಿದ್ದರು.

ದೊರೆಯು ಈ ಸ್ಥಿತಿಯನ್ನೆಲ್ಲಾ ಕೇಳಿ ತನ್ನ ಮೋಹದ ಹೆಂಡತಿಯ ಮನಸ್ಸು ಇಂದಲ್ಲದಿದ್ದರೆ ನಾಳೆಯಾದರೂ ಸರಿಹೋದೀತೆಂದು ಯೋಚಿಸಿಕೊಂಡು ಕೆಲವು ದಿವಸ ನೋಡಿದನು. ಆದರೆ ಆ ಮನಸ್ಸು ಬಹು ಜಿತವಾಗಿಯೇ ಇತ್ತು. ದೊರೆಯು ಚೆಲುವಾಜಿಯನ್ನು ಕಾಲು ಕಸವಾಗಿ ಮಾಡಿ ತಿರಸ್ಕರಿಸಿದ್ದಕ್ಕೆ ಬಹು ಸಂತೋಷಪಡುತಾ ತಾವು ಹರಕೆ ಹೊತ್ತ ಮಾರಮ್ಮ ಫಲವನ್ನು ಕೊಟ್ಟಳಲ್ಲಾ ಎಂದು ತೃಪ್ತರಾಗಿದ್ದ ದೊರೆಯ ದೊಡ್ಡ ಹೆಂಡತಿಯರು ಪುನಃ ರಾಜನ ಮನಸ್ಸು ಅವಳ ಕಡೆಗೆ ತಿರುಗುತಾ ಇರುವುದನ್ನು ಕಂಡು, ಹೊಸದಾಗಿ ಹರಕೆಯನ್ನು ಹೊರುತಾ ಸಮಯ ಬಂದಾಗ ಬಾಯಿಮುರಿಯದೆ ಕಿರಿಯವಳ ಸಾಧಾರಣ ಮಾತನ್ನು ದೋಷದಲ್ಲಿ ಗಣಸೆ ಮಾಡುತಾ ಅಣುಮಾತ್ರ ಇದ್ದದನ್ನು ಮಹತ್ತಾಗಿ ಆಡಿಕೊಳ್ಳುತಾ ಸಂದರ್ಭ ಬಂದಾಗ ಅವಳ ನಡತೆಯನ್ನು ಹೇಳನದಲ್ಲಿಯೂ ಹಾಸ್ಯದಲ್ಲಿಯೂ ಕೊನೆಗಾಣಿಸುತಾ ಇದ್ದರು. ಮೆಚ್ಚಿ ಮೆಚ್ಚಿ ಮಾಡಿಕೊಂಡ ಚಿಕ್ಕ ಹೆಂಡತಿಯ ಮೇಲೆ ಒಂದಾನೊಂದು ಸಮಯದಲ್ಲಿ ಹುಟ್ಟಿದ ಮುನಿಸು ಅಲ್ಪಕಾರಣ

ದಿಂದ ಉಂಟಾದ್ದೆಂದು ತನ್ನ ಮನಸ್ಸಿನೊಳಗೇ ಒದ್ದಾಡಿಕೊಳ್ಳುತ್ತಾ
ದೊರೆಯು ಒಂದಾನೊಂದು ದಿವಸ ಮಂತ್ರಿಯನ್ನು ಕುರಿತು ತನ
ಏಕಾಂತ ಗೃಹದಲ್ಲಿ ಹೇಳಿದ್ದೇನೆಂದರೆ—ಅಯ್ಯ ಮಂತ್ರಿ, ವಂಶೋ
ದ್ಧಾರಕ್ಕೆ ಇದುವರೆಗೂ ನಮ್ಮ ಯಾವ ಹೆಂಡತಿಯ ಹೊಟ್ಟೆ
ಯಲ್ಲಿಯೂ ಒಂದು ಕೂಸೆಯೂ ಇಲ್ಲದಂತಾಯಿತು. ಈ ಯೋ
ನೆಯಿಂದಲೇ ಹೆಂಣನ್ನು ವಿಚಾರಿಸಿ ಹೊಸದಾಗಿ ಜೇರೆ ಮದುವ
ಯನ್ನು ಮಾಡಿದೆ. ಅದು ಸಫಲವಾಗಲಿಲ್ಲ, ಯಾವುದೋ ಒಂದು
ಸಮಯದಲ್ಲಿ ನಾನು ಆಡಿದಮಾತಿನಿಂದ ಆ ಅಬಲೆಗೆ ಹೆಚ್ಚಾಗಿ
ಬಂದ ಕೋಪವು ನಾನು ಏನಮಾಡಲಿ ಎಷ್ಟು ಪರಿಹಾರವನ್ನು
ಅದಕ್ಕಾಗಿ ಮಾಡಲಿ, ಶಾಂತವಾಗದೇ ಇದೆ; ಮೊದಲು ಕೋಪದ
ವೇಳೆಯಲ್ಲಿ ಅಚಾತುರ್ಯದ ಹಿಂಸೆ ನಡೆದು ಹೋಯಿತು;
ಈಗ ಅವಳು ವಿಶೇಷವಾಗಿ ಕೋಪದಿಂದ ಯಾರೊಡನೆಯೂ
ಯಾವ ಮಾತನ್ನೂ ಆಡದೇ ಇದಾಳಲ್ಲ, ಏನುಮಾಡೋಣ? ಬಯಸಿ
ಬಯಸಿ ಬಾಳಹೊಕ್ಕರೆ ಬಡಿಗಂಡ ದಡಿ ತಂದ ಎಂದ ಹಾಗಾ
ಯಿತು. ಇದಕ್ಕೆ ಏನಾದರೂ ಉಪಾಯವನ್ನು ಹುಡುಕೈಯ್ಯ,,
ಹೀಗೆಂದು ದೊರೆ ಹೇಳಿದ ಮಾತನ್ನೆಲ್ಲಾ ಕೇಳಿ ಮಂತ್ರಿಯು ಆಗ
ಸುಮ್ಮನೆ ಇದ್ದನು.

೩ನೇ ಅಧ್ಯಾಯ.

ಮಂತ್ರಿಯಾದ ವೀರಸಿಂಹನು ದೊರೆ ಅಪ್ಪಣೇ ಕೊಡಿಸಿದ
ಮಾತನ್ನೆಲ್ಲಾ ಕೇಳಿದ ತರುವಾಯ ಮೂರುನಾಲ್ಕು ದಿವಸ ಕಳೆ

ಯಿತು. ದೊರೆಗೆ ವಿಶೇಷವಾಗಿ ಜ್ವರಬಂದು ಬಹು ಸಂಕಟ ವಾಗಿದೆ ಎಂದು ಗಾಬರಿಯಾದ ವರ್ತಮಾನ ಹುಟ್ಟಿತು. ಒಂದು ದೊಡ್ಡ ಚಂದ್ರಶಾಲೆಯಲ್ಲಿ ರಾಜನನ್ನು ಕರೆದುತಂದು ಮಲಗಿಸಿ ದರು, ಸಂಕಟದಿಂದ ಹೊರಳುವುದು ಅಧಿಕವಾಯಿತು. ಘನ ವೈದ್ಯರೆಲ್ಲಾ ಸೇರಿ ಬೇಕುಬೇಕಾದ ಚಿಕಿತ್ಸೆಯನ್ನು ಮಾಡುತಾ ಬಂದರು. ರಾಣಿವಾಸದವರೂ, ಭಾರೀ ಉದ್ಯೋಗಸ್ಥರೂ, ಸಾಧಾ ರಣ ಜನರೂ, ವರ್ತಕ ಮಂಡಲಿಯವರೂ, ಮೊದಲಾದ ಅನೇಕ ಜನ ದೊರೆಯನ್ನು ನೋಡುವುದಕ್ಕೆ ಬಂದರು. ಅರಸನ ಸಂಕ ಟವನ್ನು ನೋಡಿ ಎಲ್ಲರೂ ದುಃಖಪಡಲು ಆರಂಭಿಸಿದರು. ರಾಣಿವಾಸದಿಂದ ಹೊರಟ ರೋದನದ ಗದ್ದಲವಂತೂ ಹೇಳಿ ಶಕ್ಯವಿಲ್ಲವಾಯಿತು. ಇದನ್ನು ಕೇಳಿ ಅಂಥಾ ಸಮಯದಲ್ಲಿ ಸುಮ್ಮನೆ ಇರುವುದಕ್ಕಾದೀತೆ? ಲೋಕಮೆಚ್ಚೀತೆ? ಆದ್ದರಿಂದ ಕಡೇ ತೊಟ್ಟಿಯಲ್ಲಿದ್ದ ಚೆಲುವಾಜಿಯ ಮನಸ್ಸು ತಾವರೇ ಎಲೆಯ ಮೇಲಿನ ನೀರಿನಂತಾಯಿತು.

ರಾಜನ ದೇಹಾಲಸ್ಯವನ್ನು ಕುರಿತು ವರ್ತಮಾನಕೊಟ್ಟರು. ಅವಳಿಗೆ ಗಾಬರಿಯಾಯಿತು. ತನ್ನ ಮನದಲ್ಲಿ—ಇದೇನು ಆಶ್ಚರ್ಯ! ನಿನ್ನೇವರೆಗೂ ಸ್ವಸ್ಥವಾಗಿದ್ದ ದೊರೆಗೆಳಿಗೆ ಇಷ್ಟು ಜಾಗ್ರತೆಯಾಗಿ ಆಲಸ್ಯವೂ ಆಯಿತು, ಔಷಧವೂ ಆಯಿತು, ಮರಣ ಸಂಕಟವೂ ಉಂಟಾಗಿದೆ, ಎನ್ನುತಾರೆ. ಇದು ವಾಸ್ತವವೆ? ಮತ್ತೆ ಯಾವ ಆನಂದ ವಿಲ್ಲದಿದ್ದಾಗ್ಯೂ ಅರಶಿನ ಕುಂಕುಮದ ಆನಂದ ಒಂದು ಉಳಿದಿತ್ತು. ದೇವರು ಮುನಿದು ಅದನ್ನೂ ಕಿತ್ತು

ಕೊಳ್ಳುತಾನೆಯೆ? ಎಂದು ತಟ್ಟನೆ ಎದ್ದು, ದೊರೆ ಪ
ಸಿರುವ ತೊಟ್ಟಿಯ ಕಡೆ ಹೊರಟಳು. ಅವಳ ತಲೆಯ ಉ
ವಾದ ಗುಂಗುರುಕೂದಲು, ಹಿಂದುಗಡೆ ಹಾಕಿದ್ದ ಎಣೆ ಗಂ
ಅಳವಡದೆ ಸಳ್ಳಕ ಬಿದ್ದು ಎರಡು ಕಿವಿಯನ್ನೂ ಅ
ಯಾಗಿ ಮುಚ್ಚಿಕೊಂಡಿರಲಾಗಿ, ಬೆಳ್ಳಗೆ ಇರುವ ಅ
ಹಣೆಯಕೆಳಗೆ ಹುಬ್ಬಿನ ಕೂದಲು ಗುಂಗುರು ಗುಂಗ
ಮೂಗಿನ ಮೇಲುಗಡೆಯಿಂದ ಸೋಗೆಗಣ್ಣಿನವರಿಗೂ ಬೇವಿನ
ಯನ್ನು ಪೋಲುತಾ ಇರಲಾಗಿ, ವಿಶಾಲವಾದ ಕಣ್ಣಿನ ಹೊ
ಸಣ್ಣಕುಡಿ ಮಿಂಚನ್ನು ಧಿಃಕ್ಕರಿಸುತ್ತಿರಲಾಗಿ, ಒಂದು ಕ
ಕಂಡದ್ದನ್ನು ಇನ್ನೊಂದು ಕಣ್ಣು ಕಾಣಲಿಲ್ಲ ಎನ್ನುವಹಾ
ಮಧ್ಯೆ ನೀಟಾಗಿ ಎಸಳಾಗಿದ್ದ ನಾಸಿಕದ ಎರಡು ಹೊಳ್ಳೆಗಳ
ಸ್ವಲ್ಪ ಎತ್ತಿಕೊಂಡು ಚಿತ್ತಸ್ಥೈರ್ಯದ ಸೂಚನೆಯನ್ನು ತೋ
ಸುತ್ತಿರಲಿಕ್ಕಾಗಿ, ಅದರ ಕೆಳಗೆ ಇದ್ದ ಹಲ್ಲು ಬಾಯಿದೆರೆಯ
ನಗೆದಿದ್ದರೂ ಮಂದ ಹಾಸವನ್ನು ತೋರಿಸುತಿರಲಾಗಿ, ಆ ಗು
ಡಾದ ಮುಖದ ಎರಡು ಪಕ್ಕದಲ್ಲಿಯೂ, ಕೆಂಪು ಕೂಡಿದ ಬಿ
ಚ್ಛಾಯೆಯೊಡನೆ, ಬತ್ತಿಯೂ ಬತ್ತದಹಾಗೆ ಕಾಣುತಿದ್ದ ನುಣ
ಗಲ್ಲಗಳು ಹೊಳೆಯುತ್ತಿರಲಾಗಿ, ಕೈಕಾಲುಗಳು ಆಕೃತಿಯ
ಯಾವ ವರ್ಣದಲ್ಲಿಯೂ ಮುಖಕ್ಕೆ ತಾವು ಕಡಮೆಯಲ್ಲವೆಂದ
ತೋರುತಿರಲಾಗಿ, ಗಮನದಲ್ಲಿ ವೇಗವಿದ್ದರೂ ಇಡುವ ಮೆಲ್ಲ
ಯಿಂದ ನಡೆಗೆಯು ಗಜಗಮನೆಯೆಂಬುದನ್ನು ಸಾರ್ಥಕ ಮಾಡ
ತಿರಲಾಗಿ, ಆ ಚೆಲುವಾಜಿಯು ಕಿವಿಗಿಟ್ಟ ಮುತ್ತಿನ ವೋಲೆ

ಕತ್ತಿಗೆ ಕಟ್ಟದ್ದ ರತ್ನ ಖಚಿತವಾದ ತಾಳಿ, ಸೌಭಾಗ್ಯವನ್ನು ಸೂಚಿಸುವ ಈ ಎರಡು ಆಭರಣಗಳನ್ನು ಇಟ್ಟದ್ದುದು ಹೊರತು ಸಹಜವಾದ ಸೌಂದರ್ಯವು ತನಗೆ ತಾನೇ ಉತ್ತಮವಾದ ಆಭರಣವಾಗಿರಲಾಗಿ, ವಯ್ಯಾರದ ವೈಖರಿಯೇ ಮೂರ್ತಿವತ್ತಾಗಿ ಬರುತಿದೆಯೋ ಎನ್ನುವಹಾಗೆ ಸಾಕ್ಷಾತ್ ಆದಿಲಕ್ಷ್ಮಿಯ ಹಾಗಿದ್ದ ಆ ಅಬಲೆಯು ಸಭೆಯ ಕಡೆಗೆ ನಡೆತಂದಳು.

ಆ ಮುಖರಸದಲ್ಲಿದ್ದ ನೈಜವಾದ ಸೌಜನ್ಯವೂ, ಮಕ್ಕಳುಗಳು ಇವಳಕಡೆಗೆ ತಾವಾಗಿ ಓಡಿಬರುವಹಾಗೆ ಮಾಡುತಿತ್ತು; ಆ ರೂಪು, ಆ ಲಾವಣ್ಯ, ಹುಟ್ಟುತಾ ಬಂದ ಆ ವಯ್ಯಾರ, ಸಹ ಯೌವನಸ್ಥರ ಮನಸ್ಸನ್ನು ಕಳವಳಗೊಳಿಸುತಿತ್ತು. ವಯೋವೃದ್ಧರಿಗೆ ಸಂತೋಷವನ್ನು ಹುಟ್ಟಸುತಿತ್ತು. ವೃದ್ಧಸ್ತ್ರೀಯರು—ಸುಂಡ ತನ್ನ ಪ್ರಾಯದಲ್ಲಿ ಮೂಗಂಡಗೆ ಬಾಳಿತು ಎಂದ ಹಾಗೆ, ಇನ್ನೂ ಪ್ರಾಯವಿದೆ, ನಲಿಯುತಾಳೆ ನಮ್ಮ ಪ್ರಾಯದಲ್ಲಿ ನಾವು ಇನ್ನೂ ಎಷ್ಟೋ ಚೆನ್ನಾಗಿರಲಿಲ್ಲವೆ, ಏನರೆ? ಎಂದುಕೊಳ್ಳುತಿದ್ದರು. ಯುವತಿಯರು ತಮ್ಮ ಮನಸ್ಸಿನೊಳಗೆ ಇವಳನ್ನು ಕಂಡು ಅಸೂಯೆ ಪಡುತಿದ್ದರು. ಸವತಿಯರು ಇವಳನ್ನು ಇಣಕಿ ಇಣಕಿ ನೋಡುತಾ ಹಲ್ಲು ಹಲ್ಲು ಕಡಿಯುತಿದ್ದರು. ಆಗ ಚೆಲುವಾಜಿಯು ಹಿಂದು ಮುಂದಿನ ಭಾರಕ್ಕೆ ಒಡನೆಡುಬಳುಕುತ್ತಿರೆ ಆ ಸಭೆಯ ಕಡೆಯಲ್ಲಿ ಬಂದು ತನ್ನ ಕೆನ್ನೆಯನ್ನು ಬಲ ತೋಳಿನ ಮೇಲೆ ಇರಿಸಿಕೊಂಡು ಆ ತೋಳನ್ನು ಬಲದ ಮಂಡಿಯ ಮೇಲೆ ಒರಗಿಸಿಕೊಂಡು ಎಡದ ಮೊಳಕಾಲನ್ನು ಮಡಿಸಿಕೊಂಡು ಕೂತುಕೊಂಡಳು.

ಜನರ ರೋದನವೂ, ಗದ್ದಲವೂ, ಹೆಚ್ಚಾಗುತಾ
ವಾಗ ಮಂತ್ರಿಯು ದೂರದಿಂದ ಚೆಲುವಾಜಿಯ ಮುಖವ
ನೋಡುತಾ ಇದ್ದನು. ಅವಳ ಕಣ್ಣಿನಲ್ಲಿ ಒಂದು ತೊಟ್ಟು ನೀ
ಬರಲಿಲ್ಲ. ಇವಳ ಸ್ಥಿತಿ ಹೀಗಿರುವುದನ್ನು ನೋಡಿ ಬಹಳ ಹೊ
ಪರೀಕ್ಷಿಸಿ ಮಂತ್ರಿಯು ಆಕೆಯನ್ನು ಕುರಿತು—ಮಹಾ ತಾ
ಮಹಾರಾಜರಿಗೆ ಉಂಟಾಗಿರುವ ಸಂಕಟವನ್ನು ಕಂಡು ಇಷ
ಗಾತ್ರ ಜನ ಶೋಕಿಸುತಾ ಇದಾರೆಯಲ್ಲಾ, ನಿಮಗೆ ಸ್ವಲ್ಪ
ದುಃಖ ಉಂಟಾಗುವುದಿಲ್ಲವೆ, ಅಳು ಬರುವುದಿಲ್ಲವೆ ತಾಯಿ
ಎಂದನು.

ಈ ಮಾತನ್ನು ಕೇಳಿ ಚೆಲುವಾಜಿಯು ಎದ್ದು ನಿಂತುಕೊಂ
ಮಂತ್ರಿಯೊಡನೆ ಹೇಳಿದ್ದೇನೆಂದರೆ:—

ಹಳ್ಳಿಯಲ್ಲಿ ವಾಸಮಾಡುತಾ ಕಾಡಿನಲ್ಲಿ ಕಾಡು ಬೆರ
ಯನ್ನು ಆರಿಸಿಕೊಂಡು ಕಾಲ ಕಳೆಯುತಾ ಇದ್ದ ನನ್ನನ
ನೀವು ಮೃದುವಾಗಿ ಮಾತನಾಡಿ ಊರಿಗೆ ಕರೆದು ಕೊಂಡ
ಹೋದ್ದಕ್ಕೆ ಅಳಲೆ? ದೊರೆಗೆ ನನ್ನನ್ನು ಮದುವೆ ಮಾ
ಕೊಡಬೇಕೆಂದು ನಮ್ಮ ಹೆತ್ತಪ್ಪಾಜಿಯನ್ನು ನೀವು ಉಪಾ
ವಾಗಿ ಕೇಳಿದ್ದಕ್ಕೆ ಅಳಲೆ? ದೊರೆತನ ಮಾಡತಕ್ಕವರು ಕ್ಷ
ಕರು, ಅವರಿಗೆ ಚಿತ್ತಸ್ಥೈರ್ಯ ಕಡಮೆ, ಇಂದು ಮೋಹಿಸಿ
ಹೆಂಣನ್ನು ಮದುವೆಯಾಗಿ ನಾಳೆ ಅವಳನ್ನು ತ್ಯಜಿಸು
ಸ್ವಭಾವ ಅವರಿಗೆ ಆಜನ್ಮಸಿದ್ಧವಾಗಿದೆ, ನಮ್ಮ ಹುಡುಗಿ
ಆಸ್ಥಿತಿ ಬರುವುದಕ್ಕಿಂತಲೂ ಅವಳು ಬಡವರನ್ನು ವಿವಾಹವಾ

ಸೌಜನ್ಯದಿಂದ ಸುಖವಾಗಿರುವುದು ಉತ್ತಮವೆಂದು ನಮ್ಮ ಹೆತ್ತಮ್ಮಯ್ಯ ಹೇಳಿದಾಗ್ಯೂ ನಮ್ಮಪ್ಪಾಜಿಯನ್ನು ಒಡಂಬಡಿಸಿಕೊಂಡು ನನ್ನನ್ನು ಮಹಾರಾಜರಿಗೆ ನೀವು ಮದುವೆ ಮಾಡಿಸಿದ್ದಕ್ಕೆ ಅಳಲೆ? ನನ್ನ ಪತಿಯ ಪ್ರೀತಿ ನನ್ನ ಮೇಲೆ ವಿಶೇಷವಾಗಿದೆ ಎಂದು ತಿಳಿದು ನನ್ನ ಸವತಿಯರು ಅಸೂಯೆ ಪಡುತಾ ಇದ್ದುದಕ್ಕಳಲೆ? ಒಂದು ದಿನ ರಾಜರು ನನ್ನಲ್ಲಿ ಸರಸವಾಗಿ ಮಾತನಾಡುತಾ, ನಮ್ಮ ಕೆಲಸವನ್ನು ಕೂಡಿದ ಮಟ್ಟಿಗೂ ನಾವು ಮಾಡಿಕೊಳ್ಳುವುದು ಉತ್ತಮವೆಂದು ನಾನು ಲೋಕಾಭಿರಾಮವಾಗಿ ಮಾಡಿದ ಅರಿಕೆಗೆ, ನಾನು ಕಾಡುಮನುಷ್ಯಳೆಂದು ಜರಿದು ಪ್ರಭುಗಳು ಅಂದಿನಿಂದ ನನ್ನೊಡನೆ ಮಾತನ್ನು ಬಿಟ್ಟು ನನ್ನನ್ನು ಕಡೇ ತೊಟ್ಟಿಗೆ ಕಳುಹಿಸಿ ನನಗೆ ಕಗ್ಗಲ ರಾಗಿ ಮುಗ್ಗಲ ಹುರಳಿಯನ್ನು ಹಾಕಿಸುತಾ ಹಿಂಸೆಯನ್ನು ಕೊಟ್ಟು ತರುವಾಯ ಬಹು ದಿವಸದಮೇಲೆ ಆ ಹಿಂಸೆಯನ್ನು ದಿನ ಕ್ರಮೇಣ ಕಡಮೆಮಾಡುತಾ ನೆವನೆವದಲ್ಲಿ ಪುನಃ ಅಭಿಮಾನವನ್ನು ದಿನ ಕ್ರಮೇಣ ಹೆಚ್ಚಿಸುತಾ ಅಗತ್ಯವಿಲ್ಲದ ಉಪಚಾರಗಳನ್ನು ನನಗೆ ತೋರಿಸುವ ಹಾಗೆ ಮಾಡಿಸಿದ್ದಕ್ಕಳಲೆ? ಇಂಥಾ ರಾಜೋಪಚಾರಗಳೂ ಸಾಕು ಕೂಡಲೆ ಉಂಟಾಗುವ ಆ ತಿರಸ್ಕಾರವೂ ಸಾಕು ನನಗೆ ಯಾವುದೂ ಬೇಡವೆಂದು ನಾನು ಶಾಶ್ವತವಾದ ನನ್ನ ಬಡತನದ ರೀತಿಯನ್ನು ಬಿಡದೆ ಸ್ವಸ್ಥಳಾಗಿರಲು ಈ ಮಹಾ ಸನ್ನಿಧಾನಕ್ಕೆ ಆಲಸ್ಯವೆಂದು ವರ್ತಮಾನ ಹುಟ್ಟಿದ್ದಕ್ಕಳಲೆ? ಈಗ ಯಾವ ಜಾಡ್ಯವೂ ಇಲ್ಲ

ದಿದ್ದರೂ ದೊರೆಗಳು ಸಂಕಟ ಪಡುವರಂತೆ ಮಲಗಿರುವುದಕ್ಕಳಲಿ ಇದಕ್ಕಾಗಿ ನೀನು ಅಳುವುದಿಲ್ಲವೇಕೆ ಎಂಬದಾಗಿ ಕಪಟನಾಟ ಸೂತ್ರ ಧಾರಿಯಂತೆ ನೀವು ನನ್ನನ್ನು ಕೇಳುವುದಕ್ಕಳಲಿ ಯಾವ ಯಾವುದಕ್ಕೆ ನಾನು ಅಳಲಿ ಮಂತ್ರಿಗಳೇ ?

ಹೀಗೆ ಈ ಅರಸಿಯಾದ ಚೆಲುವಾಜಿಯು ಅಡಿ ನಿಲ್ಲಿಸಿದ ಕೂಡಲೆ ಅಲ್ಲಿ ನೆರೆದಿದ್ದ ಜನರೆಲ್ಲಾ ಸ್ತಂಭೀಭೂತರಾದರು; ಅಳುತಾ ಇದ್ದವರ ಅಳು ನಿಂತುಹೋಯಿತು. ಮಾತನಾಡುತ್ತಾ ಇದ್ದವರ ಮಾತು ನಿಂತುಹೋಯಿತು. ಜನರ ಗಜಾಲು ನಿಂತುಹೋಯಿತು. ಮಲಗಿದ್ದ ದೊರೆಯು ಇವಳ ಮಾತನ್ನು ಕೇಳಿ ಎದ್ದು ಕೂತುಕೊಂಡನು. ಅರಮನೆಯಲ್ಲಿ ನೆರೆದಿದ್ದ ಜನರೆಲ್ಲಾ ಎದ್ದು ಹೊರಟು ಹೋದರು. ತರುವಾಯ ದೊರೆಯು ಮಂತ್ರಿಯನ್ನು ಕುರಿತು—ಅಯ್ಯಾ ಮಂತ್ರಿ, ಇವಳು ಸಾಧಾರಣ ಹೆಂಗಸಾಗಿ ತೋರುವುದಿಲ್ಲ, ಬಹು ತಟವಾಣಿಯಾಗಿ ತೋರುತಾಳೆ, ಇವಳನ್ನು ದೇಶಭ್ರಷ್ಟಳನ್ನಾಗಿ ಮಾಡಿ, ಶಿರಚ್ಛೇದನಮಾಡಿಸಿ ನನಗೆ ತಿಳಿಸುವನಾಗು, ಎಂದು ಆಗ್ರಹಗೊಂಡು ಹೇಳಿದನು. ಅದಕ್ಕೆ ಮಂತ್ರಿಯು "ಅಪ್ಪಣೆಯಾದಂತೆ ನಡಿಸುತ್ತೇನೆ" ಎಂದು ಹೇಳಿ ತನ್ನ ಮನಸ್ಸಿನಲ್ಲಿ—ಅಯ್ಯೋ ಸೀತಾದೇವಿಗೆ ಬಂದಕಷ್ಟದಹಾಗೆ ನಿರಪರಾಧಿಯಾದ ಚೆಲುವಾಜಿಗೂ ಪ್ರಾಪ್ತವಾಯಿತಲ್ಲಾ! ತಾನು ದೊರೆಯ ಸಂತಾನವೃದ್ಧಿಯಾಗಲೆಂದು ಮಾಡಿದ ಕಾರ್‍ಯದ ಫಲ ಹೀಗೆ ಅಭಾಸವಾಯಿತಲ್ಲಾ ! ಎಂದು ಕಣ್ಣಿನಲ್ಲಿ ನೀರಹಾಕುತಾ ಇರುವ ಸಮಯದಲ್ಲಿ, ಚೆಲುವಾಜಿಯು ಎದ್ದು

ನಿಂತು ಕೈಯನ್ನು ಮೇಲಕ್ಕೆ ಎತ್ತಿ—"ಹಾ ಹಾ! ಇದೇನು ವಿಪತ್ತು ಸಂಭವಿಸಿತು, ವಿಧಿಯ ನಿಯಾಮಕವನ್ನು ಮೀರುವವರ್‍ಯಾರು! ಭೂನ್ಯಂತರಕ್ಷಗಳಿರಾ, ಸೂರ್ಯಚಂದ್ರಾದಿಗಳಿರಾ, ನನ್ನ ಪಾತಿವ್ರತ್ಯಕ್ಕೆ ನೀವು ಸಾಕ್ಷಿಯಾಗಿರಿ. ಈ ನಡವಳಿಕೆಯನ್ನು ಧರ್ಮದೇವತೆ ಮೆಚ್ಚಳು; ಆದರೆ ನನ್ನಲ್ಲಿ ಸತ್ಯವಿದ್ದರೆ, ನನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡು, ಧೀರರಾದಂಥ ಇಬ್ಬರು ಗಂಡುಮಕ್ಕಳನ್ನು ಹೆತ್ತು ಅವರ ಮೂಲಕ ನನ್ನ ಮಂಚದ ಕಾಲಿಗೆ ದೊರೆಯನ್ನು ಬಿಗಿಯಿಸಿ ನಾನಿರುವ ಕಡೆಗೆ ತರಿಸಿಕೊಳ್ಳುವುದೇ ಖಂಡಿತ, ಇದಕ್ಕೆ ತಾರಾಗಣಗಳೆಲ್ಲಾ ಸಾಕ್ಷಿಯಾಗಿರಲಿ, ಎಂದು ಹೇಳಿ ಮಂತ್ರಿಯ ಸಂಗಡ ಹೊರಟು ಹೋದಳು. ತರುವಾಯ ವೀರಸಿಂಹನು ಆ ರಾಣಿಯನ್ನು ಕಾಡಿನಲ್ಲಿ ಕೊಲ್ಲಿಸಿದೆನೆಂದು ಮೂರು ದಿನಸದ ಮೇಲೆ ದೊರೆಗೆ ವರದಿ ಹೇಳಿದನು.

೪ನೇ ಅಧ್ಯಾಯ.

ಎಷ್ಟು ಗುಟ್ಟಾಗಿ ದೊರೆಗಳು ಯಾವ ಕೆಲಸ ಮಾಡಿದಾಗ್ಯೂ ಅದು ಎಂದಾದರೂ ಜನರಿಗೆ ತಿಳಿಯದೇ ಇರುವುದಿಲ್ಲ. ಪ್ರಜೆಗೆ ಗಳೆಲ್ಲರೂ ಅರಸನ ವಿಚಾರವಾಗಿ ಆಡಿಕೊಳ್ಳುವುದಕ್ಕೆ ಆರಂಭಿಸಿದ ವಿಧಾನ ಹೇಗೆಂದರೆ :—

ಭೀಮುಜೋಯಿಸ—ಏನು ಸೆಟ್ಟರೆ, ಇಂದು ದಿನ ಶುದ್ಧಿಯೇನೋ ಚೆನ್ನಾಗಿದೆ. ಮಿಥುನ ಲಗ್ನ ಬಹು ಪ್ರಶಸ್ತವಾದ್ದು.

ನಿಮ್ಮ ಮಗನಿಗೆ ಚೌಲ ಜರುಗಬಹುದು.

ಯಂಗಸೆಟ್ಟಿ—ಆಗಲಿ ಬುದ್ಧಿ; ಆದರೆ ಮಗನಿಗೆ ಚೌಲವಾಗು ವುದಕ್ಕೆ ಮುಂಚೆ ನನಗೇ ಚೌಲವಾಗಿದೆ. ಕೈಯಲ್ಲಿ ಹಣವಿಲ್ಲ ಪೂರ್ವದಂತೆ ವ್ಯಾಪಾರವೇನೂ ನಡೆಯುವುದಿಲ್ಲ.

ಭೀಮಜೋಯಿಸ—ಎಲ್ಲಾ ವ್ಯಾಪಾರಗಾರರೂ ಹೀಗೆಯೇ ಹೇಳು ತಾರಲ್ಲಾ! ಹೀಗಾಗುವುದಕ್ಕೆ ಕಾರಣವೇನು?

ಯಂಗಸೆಟ್ಟಿ—ದೇಶಾಂತರದಿಂದ ಸರಕು ಇಲ್ಲಿಗೆ ಬರುವುದಿಲ್ಲ.

ಭೀಮಜೋಯಿಸ—ಸರಕು ಯಾಕೆ ಬರುವುದಿಲ್ಲ.

ಯಂಗಸೆಟ್ಟಿ—ವರ್ತಕರು ತರುವುದಿಲ್ಲ.

ಭೀಮಜೋಯಿಸ—ಎಷ್ಟು ದಿವಸದಿಂದ ಹೀಗಾಗಿದೆ?

ಯಂಗಸೆಟ್ಟಿ—ಮೊದಲು ಹಾಗೂ ಹೀಗೂ ಇತ್ತು. ಚೆಲುವಾ ಜಮ್ಮಣ್ಣಿಯವರು ತೀರಿಹೋದಾಗಿನಿಂದ ಈ ದಾರಿದ್ರ್ಯ ಕಾಲ ಹಾಕಿಕೊಂಡಿತು. ಈಗ ಕೆಲವು ದಿವಸದಿಂದ ವ್ಯಾಪಾರ ಲೇಶವೂ ಇಲ್ಲ.

ಬಂದಿಗೌಡ—ಅವರು ತೀರಿಹೋದರೆ ವ್ಯಾಪಾರ ಏಕೆ ನಡೆಯ ಬಾರದು?

ಭೀರ್‌ಸಿಂಗು—ಸರ್ಕಾರದಲ್ಲಿ ಕ್ರೌರ್ಯ ಹೆಚ್ಚಾಯಿತು. ಅಂಥಾ ಒಳ್ಳೇ ಹುಡುಗಿಯನ್ನು ನಿಷ್ಕಾರಣವಾಗಿ ಕೊಲ್ಲಿಸಿದರು. ದೊರೆಗೆ ಹುಚ್ಚು ಹಿಡಿದಿದೆ; ಮನಸ್ಸು ಬಂದಹಾಗೆ ಅಪ್ಪಣೆ ಮಾಡುತಿದಾರೆ; ಇಂಥಾ ಸೀಮೆಗೆ ವ್ಯಾಪಾರಗಾ ರರು ಬಂದರೆ ಯಾವಗಳಿಗೆಯಲ್ಲಿ ಏನು ಅಪ್ಪಣೆಯಾಗುವು

ದೋ ಎಲ್ಲಿ ತಾವು ಕೆಟ್ಟುಹೋದೇವೋ ಎಂದು ದೇಶಾಂತರದ ವರ್ತಕರು ಹೆದರಿಕೊಳ್ಳುತಾರೆ.

ಯಂಗಸೆಟ್ಟಿ—ಹಾಗೆಲ್ಲಾ ಹೇಳುವುದಕ್ಕಾದೀತೆ? ನಮ್ಮ ದೊರೆಗಳೇನೋ ಮಹಾರಾಯರು ಸತ್ಯವಂತರು. ದರಬಾರಿನಲ್ಲಿ ಹೇಗೆ ನಡೆಯುವುದೋ, ದೊಡ್ಡ ಮಾತು ನಮಗೇಕೆ ?

ಮನ್ನಾಜಿ—ದೊಡ್ಡ ಮಾತೇನು, ಗಿಡ್ಡಮಾತೇನು? ಹಳ್ಳಿಯಲ್ಲಿ ಹುಟ್ಟಿ ಕಾಡಿನಲ್ಲಿ ಬೆಳೆದು ಬಡತನವೋ ಸಿರಿತನವೋ, ಅದಕ್ಕೆ ತಕ್ಕ ಹಾಗೆ ಸುಖವಾಗಿದ್ದ ಹುಡುಗಿಯನ್ನು ಕರೆತಂದು ಮದುವೆಯಾಗಿ ಕಡೆಗೆ ಅವಳನ್ನು ತಲೇ ಹುಯಿಸಿದನಲ್ಲಾ, ಈ ದೊರೆ ಆ ಹುಡುಗಿಯ ಗೋಳು ತಟ್ಟದೇ ಹೋದೀತೆ. ಸೀತೆಯ ಗೋಳು ತಟ್ಟಿ ಲಂಕೆ ಹಾಳಾಯಿತು, ದ್ರೌಪದಿಯ ಗೋಳು ತಟ್ಟಿ ಕೌರವರು ನಾಶವಾದರು.

ಈ ಪ್ರಕಾರ ಪ್ರಜೆಗಳು ದೊರೆಯನ್ನು ಆಕ್ಷೇಪಿಸುತಾ ಇದ್ದರು.

ದೊರೆಯು ಮೆಚ್ಚಿ ಮೆಚ್ಚಿ ವರಿಸಿದ ತನ್ನ ಪ್ರಾಣದರಸಿ ಹೊರಟು ಹೋದಮೇಲೆ ಅವಳ ಮೇಲೆ ಹುಟ್ಟಿದ ಕೋಪವನ್ನು ಬಿಟ್ಟು ಮನಸ್ಸನ್ನು ಸಮಾಧಾನವಾದ ಸ್ಥಿತಿಗೆ ತಂದುಕೊಳ್ಳಲು ಕೆಲವು ಕಾಲ ಬೇಕಾಯಿತು. ಆಗ್ರಹದಿಂದ ಒಂದು ನಿಮಿಷದಲ್ಲಿ ತೋರಿಸಿದ ಕ್ರೌರ್ಯವನ್ನು ನೆನಿಸಿಕೊಂಡು—

ನನಗೆ ಸಂತಾನವಿಲ್ಲವೆಂಬ ಚಿಂತೆಯಿಂದ ಮೂರನೇ ಹೆಂಡತಿಯನ್ನು ಮದುವೆಯಾದೆ; ಅವಳ ಅಹಂಕಾರವು ನನಗೆ ಇಲ್ಲದ ಕೋಪವನ್ನು ಹುಟ್ಟಿಸಿತು. ಆದರೆ ಅವಳ ಮನಸ್ಸನ್ನು ಪರೀಕ್ಷಿಸುವುದಕ್ಕಾಗಿ ನಾವು ಮಾಡಿದ ಪ್ರಯತ್ನವು ಸಾತ್ವಿಕ ಸ್ವಭಾವದ್ದಾಗಿ ಕಾಣಲಿಲ್ಲ; ಬಹು ಸೂಕ್ಷ್ಮಮತಿಯಾದ ನನ್ನ ಹೆಂಡತಿಯು ಅದನ್ನು ಬೇಗ ಕಂಡುಹಿಡಿದು ನಮ್ಮ ಗುಟ್ಟನ್ನು ಬಹಿರಂಗಮಾಡಿದಳು. ನಾವು ಅವಳ ವಿಷಯದಲ್ಲಿ ತೋರಿಸಿದ ಚರ್ಯವು ಅಷ್ಟು ಶ್ಲಾಘ್ಯತರವಾದ್ದೆಂದು ಕಾಣುವುದಿಲ್ಲ. ಮೂಢರಾದ ಸ್ತ್ರೀರಲ್ಲಿ ನಾವು ಆಡಿದ ಆ ಅಭ್ಯಾಸವು ಎಲ್ಲರಲ್ಲಿಯೂ ಜರುಗೀತೆ? ಎಷ್ಟೋ ಪ್ರೀತಿಯಿಂದ ಮದುವೆಯಾಗಿ ಮಧ್ಯೆ ತಿನ್ನದ ವಿಷವನ್ನು ತಲೆಗೆ ಏರಿಸಿಕೊಂಡು ಕಡೇ ತೊಟ್ಟೇವಾಸಕ್ಕೂ ಕಗ್ಗಲರಾಗಿ ಮುಗ್ಗಲಹುರುಳಿಗೂ ಅವಳನ್ನು ಗುರಿಮಾಡಿ, ಅಲ್ಪ ವಿಷಯಕ್ಕಾಗಿ ಅವಳ ಪ್ರಾಣವನ್ನೇ ತೆಗೆಯಿಸದೆ ನಲ್ಲಾ! ಈ ಕ್ರೌರ್ಯವು ಸ್ತ್ರೀಹತ್ಯ ದೋಷಕ್ಕೆ ನನ್ನನ್ನು ಗುರಿ ಮಾಡದೆ?

ಹೀಗೆಲ್ಲಾ ಚಿಂತಿಸುತಾ ಅರಸನು ಮಂತ್ರಿಯನ್ನು ಕರಿಯಿಸಿ ಆತನನ್ನು ಕುರಿತು ಹೇಳಿದ್ದೇನೆಂದರೆ :—

ದೊರೆ—ಏನಯ್ಯ ಮಿತ್ರ, ನನಗೆ ಹೆಚ್ಚಾಗಿ ಮನೋವ್ಯಥೆಯು ದಿನೇ ದಿನೇ ದೇಹವನ್ನು ದಹಿಸುತಾ ಇದೆ. ವಂಶವೃದ್ಧಿಯಾಗುವುದಕ್ಕಾಗಿ ಮಾಡಿದ ಪ್ರಯತ್ನವು ಹೃದಯಶೂಲವಾಯಿತಲ್ಲಯ್ಯ. ಅವಳಿಗೆ ಶಿರಚ್ಛೇದನ ಮಾಡಿಸಿ

ಬಿಟ್ಟೆಯ ?

ಮಂತ್ರಿ—ಮೊದಲು ಅಪ್ಪಣೆಯಾದ್ದನ್ನು * ನಡಿಸಿದೇನೆ ಬುದ್ಧಿ.

ದೊರೆ—(ಈ ಉತ್ತರದ ಮರ್ಮವನ್ನು ತಿಳಿಯದೆ) ಅದು ಸರಿಯೆ, ಯಜಮಾನ ಹೇಳಿದ ಮಾತನ್ನು ಆಕ್ಷಣದಲ್ಲಿಯೇ ಜರುಗಿಸತಕ್ಕ ಮಂತ್ರಿಯನ್ನು ಹೊಂದಿರುವುದರಲ್ಲಿ ನಾನು ಕೇವಲ ಅದೃಷ್ಟಶಾಲಿಯೆಂದು ಲೋಕವೇ ಬಲ್ಲದು. ಆದರೆ ಅನರ್ಥ ಸಂಭವಿಸುವುದೆಂದು ದೂರದೃಷ್ಟಿಯುಳ್ಳ ನಿಮ್ಮಂಥ ಸಚಿವ ಶಿರೋಮಣಿಗಳು ಯೋಚಿಸತಕ್ಕ ಉಪಾಯ ಮಾಡಿ ದೋಷಸಂಘಟಣವಾಗುವುದನ್ನು ನಿವಾರಣ ಮಾಡುವುದು ನಿಮ್ಮ ಕರ್ತವ್ಯವೇ ಆಗಿದೆ.

ಮಂತ್ರಿ—ಸನ್ನಿಧಾನದ ಸೇವಕ ನಾನು. ಸ್ವಾಮಿಕಾರ್ಯವನ್ನು ಎಷ್ಟರಮಟ್ಟಿಗೆ ಪ್ರಾಮಾಣಿಕವಾಗಿ ಮಾಡಬೇಕೋ ಅಷ್ಟರ ಮಟ್ಟಿಗೆ ನಾನು ಮಾಡಿದೇನೆ ಎಂಬ ಅಂಶವನ್ನು ಈಗೆ ಅರಿಕೆ ಮಾಡಲಾರೆ, ಅದೆಲ್ಲಾ ಕಾಲಕ್ರಮದಲ್ಲಿ ವೇದ್ಯವಾಗುವುದು.

ದೊರೆ—(ಇದೇನು ಸಂದಿಗ್ಧವಾಗಿ ಮಾತನಾಡುತಾನೆ ಎಂದುಕೊಳ್ಳುತ್ತಾ) ಈ ಬಗೆ ಚಿಂತೆಯ ಜೊತೆಗೆ ದೇಹಾಲಸ್ಯ ಬೇರೆ ಬಾಧಿಸುತ್ತಿದೆ.

ಮಂತ್ರಿ—ನಮ್ಮ ದೇಶದ ವೈದ್ಯರೂ ದೇಶಾಂತರದ ಚಿಕಿತ್ಸಕರೂ

---

* ದೊರೆಯು ಮಂತ್ರಿಯನ್ನು ಕುರಿತು—೧. ದೇಶಭ್ರಷ್ಟಳನ್ನಾಗಿ ಮಾಡು ೨. ಶಿರಚ್ಛೇದನ ಮಾಡಿಸು, ಎಂದು ಹೇಳಿದ್ದನು.

ತಮ್ಮ ಕೈಲಾದ ಔಷಧವನ್ನೆಲ್ಲಾ ಕೊಟ್ಟರೂ, ಗುಣ ಮುಖವಾಗದೇ ಇದೆ. ಮನೋವ್ಯಥೆಯಿಂದ ಇದೆಲ್ಲಾ ಸಂಭವಿಸಿದೆ ಎಂದು ಹೇಳುತಾರೆ. ದೇಶಾಟಣ ಮಾಡು ವುದು ಸಮುದ್ರದ ಮೇಲೆ ನಾವೆಯಲ್ಲಿ ಸಂಚರಿಸುವುದು ಸಹಾ ದೇಹಕ್ಕೆ ಒಳ್ಳೆಯದು ಎಂದು ಅಭಿಪ್ರಾಯಪಡು ತಾರೆ. ತಿಳಿಯಬಂದ ಅಂಶವನ್ನು ಅರಿಕೆ ಮಾಡಿದೇನೆ.

ದೊರೆ—ಅಯ್ಯ, ವಿಚಾರಮಾಡದೆ ನೀನು ಯಾವುದನ್ನೂ ಅರಿಕೆ ಮಾಡುವುದಿಲ್ಲವೆಂದು ನಾನು ಬಲ್ಲೆ. ಹಾಗಾದರೆ ಸಮೀಪ ವಾಗಿರುವ ಕೆಲವು ರೇವುಪಟ್ಟಣಗಳಿಗೂ, ದ್ವೀಪಗಳಿಗೂ ಹೋಗಿ ಬರೋಣ. ದೇಶಗಳನ್ನು ನೋಡಿದ ಪ್ರಯೋ ಜನದ ಜೊತೆಗೆ ಸಮುದ್ರದ ಗಾಳಿಯಿಂದ ಆರೋಗ್ಯ ಭಾಗ್ಯವೂ ಉಂಟಾಗುವುದು. ತಕ್ಕ ಏರ್ಪಾಡನ್ನು ಮಾಡಿ ಸುವನಾಗ್ಯೆ.

೫ನೇ ಅಧ್ಯಾಯ.

ಆಗ ರಾಜನ ಮನಸ್ಸಿಗೆ ಉಲ್ಲಾಸ ಹುಟ್ಟುವಹಾಗೆ ಕುದುರೇ ಸವಾರಿ, ವನವಿಹಾರ, ಬೇಟೆ ಇವುಗಳು ಆಗಾಗ್ಗೆ ಜರುಗುವಂತೆ ಏರ್ಪಾಡಾಯಿತು. ಇದು ಸರಿಯಾಗಿ ನಡೆ ಯುವುದಕ್ಕೆ ಜನರೂ ಚಾಕರರೂ ಸಿದ್ಧರಾಗಿಯೇ ಇರುತಾ ತಂತಮ್ಮ ಕೆಲಸಗಳನ್ನು ಮಾಡುತಿದ್ದರು. ಸಮುದ್ರ ಯಾನ

ಕ್ಕಾಗಿ ಒಂದು ಹಡಗು ಸಿದ್ಧವಾಯಿತು. ಅದಕ್ಕೆ ಕೆಲವು ದೋಣಿಗಳನ್ನೂ, ಹರಿಗೋಲುಗಳನ್ನೂ ತಗಲಿಸಿದರು. ದೊರೆಯು ಪರಿವಾರಸಮೇತ ಹಡಗಿನಲ್ಲಿ ಕುಳಿತು ನೀರಿನ ಮೇಲೆ ತೆರಳಿದನು. ಕೆಲವು ದಿವಸದ ವರೆಗೆ ಹಡಗಿನ ಪ್ರಯಾಣವಾದ ಮೇಲೆ ಲಕ್ಷದ್ವೀಪದ ಕಡೆ ಹೋಗುತಿರುವಾಗ ದೊಡ್ಡದಾಗಿ ತುಫಾನ್ ಗಾಳಿ ಎದ್ದು ಹಡಗು ಮುಳುಗಿಹೋಗುವ ಸಮಯವಾಯಿತು. ಆ ಪ್ರಚಂಡಮಾರುತದ ವೇಗವನ್ನು ತಡೆಯಲಾರದೆ ದೊರೆಯು ಭೀತಿಯಿಂದ ಇಬ್ಬರು ಅಂಗರಕ್ಷಕರನ್ನು ಕರೆದುಕೊಂಡು ಹಡಗಿಗೆ ತಗಲಿಸಿದ್ದ ಒಂದು ದೋಣಿಗೆ ಹಾರಿ ಅದರಲ್ಲಿ ಕೂತುಕೊಂಡು ಹೊರಟನು. ಉಳಿದವರೆಲ್ಲರೂ ಹೀಗೆಯೋ ಪ್ರಾಣಭೀತಿಯಿಂದ ಇತರ ದೋಣಿಗಳಲ್ಲಿಯೂ, ಹರಿಗೋಲಲ್ಲಿಯೂ ಕುಳಿತು ದಿಕ್ಕು ದಿಕ್ಕಿಗೆ ಹೊರಟುಹೋದರು.

ದೊರೆ ಕೂತಿದ್ದ ದೋಣಿಯು ಎತ್ತೆತ್ತಲೋ ಹೊರಟಿತು; ದಾರಿ ಗೊತ್ತಿಲ್ಲ. ಹಗಲು ರಾತ್ರೆ ಎಂಬುವುದು ಗೊತ್ತಿಲ್ಲ. ಮಳೆಯೋ ಸಂತತವಾಗಿ ಕುಂಭದ್ರೋಣವೇ ಕರೆಯುತ್ತಿತ್ತು. ಸಮುದ್ರದ ಅಲೆಯೋ ಬೆಟ್ಟದಹಾಗೆ ಬಂದು ದೋಣಿಯನ್ನು ಮೇಲಕ್ಕೆ ತೆಗೆದುಕೊಂಡುಹೋಗಿ ಕೆಳಕ್ಕೆ ಎತ್ತಿಹಾಕುತಿತ್ತು. ದೋಣಿ ಎಲ್ಲಿ ಮುಳುಗಿಹೋಗುವುದೋ ಎಂದು ಭಯವಾಗುತಿತ್ತು. ಹೀಗಾಡಿ ಹಾಗಾಡಿ ಈಕಡೆ ಆಕಡೆ ತಾಟಾಡಿ ಆ ನಾವೆಯು ಒಂದು ಎಡತಿಟ್ಟಿನ ತಡಿಗೆ ಬಂತು. ಏನಾದರೂ ಆಗಲಿ ಬದುಕಿದೆಯ ನನ್ನ ಬಡ ಜೀವವೆ, ಎಂದುಕೊಂಡು

ಗಟ್ಟಿಮನಸ್ಸು ಮಾಡಿಕೊಂಡು ದೊರೆಯೂ ಇಬ್ಬರು ಆಳುಗಳೂ
ಆ ಭೂಮಿಯಮೇಲೆ ಇಳಿದರು. ಆ ಕೂಡಲೆ ದೊರೆಯು
ಎಲಾ ನನಗೆ ಬಲದ ಕಣ್ಣು ಅದರುತಾ ಇದೆ, ಶುಭಸೂಚನೆ
ಯಾಗಿದೆ ಎಂದನು. ಆಗ ಹೊನ್ನನೆಂಬ ರಾಜಸೇವಕನು—ಬುದ್ಧಿ,
ಬಲಗಡೆ ದೂರವಾಗಿ ದೀಪದ ಬೆಳಕು ಮಿಣಿಗುಟ್ಟುವಹಾಗಿದೆ
ಎಂದನು. ಮೂರು ಮಂದಿಯೂ ಅದನ್ನು ಕಂಡು ಅದೇ
ನೇರಕ್ಕೆ ಹೊರಟರು. ಹೋಗೆಹೋಗುತಾ ಬೆಳಕು ಹೆಚ್ಚಾ
ಯಿತು. ಒಂದು ದೊಡ್ಡ ಉಪ್ಪರಿಗೆಯಂತೆ ಕಾಣಿಸಿತು.
ಮುವ್ವರೂ ಆ ಮನೆಯ ಬಾಗಿಲಿಗೆ ಹೋಗಿ ನಿಂತುಕೊಂಡು
—ಇಲ್ಲಿ ಯಾರೋ ಮನುಷ್ಯರು ವಾಸವಾಗಿರುವಂತೆ ಕಾಣುತ್ತಿದೆ,
ಇವರೇನು ಕಳ್ಳರೇ, ಕಾಡುಜನರೇ, ರಾಕ್ಷಸರೇ, ನಾವು ಕೂಗಿ
ದರೆ ನಮ್ಮನ್ನು ಏನು ಮಾಡಿಬಿಟ್ಟಾರೋ, ಹೇಗಾದರೂ ಆಗಲಿ
ಈಗಿರುವುದಕ್ಕಿಂತಲೂ ಹೆಚ್ಚಾದ ಕಷ್ಟ ಸಂಭವಿಸಲಾರದು
ಎಂದು ಬಾಗಿಲನ್ನು ತಟ್ಟಿದರು.

ಒಳಗೆ ದಾದಿಯು—ಬುದ್ಧಿ, ಯಾರೋ ಅರ್ಧರಾತ್ರಿ
ಹೊತ್ತಿನಲ್ಲಿ ಜನಸಂಚಾರವೇ ಇಲ್ಲದ ಈ ದ್ವೀಪದಲ್ಲಿ ಬಂದು
ಕದಾ ತಟ್ಟುತಾರೆ. ಅವರು ಯಾರಿರಬಹುದು? ನನಗೆ ಭಯ
ವಾಗುತಿದೆ; ಇವರೇನು ಸಮುದ್ರದ ಕಳ್ಳರೋ, ಬೇರೆ ಕಾಡು
ಜನರೋ, ಇಲ್ಲ ಪಿಶಾಚಿಯೋ ಗೊತ್ತಿಲ್ಲ; ನನಗೆ ಕೈ ಕಾಲು
ನಡಗುತಾ ಇದೆ, ಎಂದಳು. ಅದಕ್ಕೆ ಯಜಮಾನಿಯು—ರುದ್ರಿ
ಪಿಶಾಚಿಯಾದರೆ ಗಾಳೀ ರೂಪದಲ್ಲಿ ಹೇಗಾದರೂ ಒಳಕ್ಕೆ

ನ್ನನ್ನೇ, ಕ್ರಿತ್ರಿಮದ ಆಲಸ್ಯಕ್ಕಾಗಿ ಸ್ವಾಮಿಪರೀಕ್ಷಾರ್ಥ
ವಾಗಿ ಮಲಗಿದ್ದಾಗ ಈ ರಹಸ್ಯವನ್ನು ತಿಳಿದಿದ್ದ ನಾನು ಮಾಡಿದ
ಮರ್ಮೋದ್ಘಾಟನೆಯ ಅಪರಾಧಕ್ಕೆ ಶಿರಶ್ಛೇದನ ಮಾಡಬೇ
ಂದು ಅಪ್ಪಣೆಯಾದ್ದೂ ನನ್ನನ್ನೇ, ಸಮುದ್ರದ ಎಡತಿಟ್ಟನಲ್ಲಿ
ದ್ದ ಒಂದು ಮನೆಯೊಳು ಮಂತ್ರಿಯು ಕರೆದುಕೊಂಡು
ಗಿ ಇರಿಸಿಬಂದದ್ದೂ ನನ್ನನ್ನೇ, ಹಟಾತ್ತಾಗಿ ತಮ್ಮ ಸವಾ
ಯು ಅಲ್ಲಿಗೆ ದಯಮಾಡಿಸಿ ನನ್ನಲ್ಲಿ ಕೃಪೆ ಇಟ್ಟು ಅಲ್ಲಿ
ನೂರು ದಿವಸ ಇದ್ದು ನನ್ನ ಗುರುತು ಗೊತ್ತಾಗದೇ ಗಂಧರ್ವ
ವಿವಾಹ ಮಾಡಿಕೊಂಡು ಸವಾರಿಯು ಹಿಂತಿರುಗಿ ಬಂದ ಮೇಲೆ
ನಾನು ಆ ಕೂಡಲೆ ಗರ್ಭಿಣಿಯಾಗಿ ಹಡೆದ ಅವುಳಿ ಗಂಡು
ಮಕ್ಕಳೇ ಇವರಿಬ್ಬರೂ, ಅವರು ಧರಿಸಿಕೊಂಡಿರುವ ವಸ್ತ್ರಗಳೂ
ಆಭರಣಗಳೂ ಮಹಾಸ್ವಾಮಿಯೇ ದಯಪಾಲಿಸಿದ್ದು, ಅವರಿಟ್ಟಿ
ರುವ ಮುದ್ರೇ ಉಂಗುರ ಕಂಠೀಸರವೆಲ್ಲಾ ಸ್ವಾಮಿಯೇ ನನಗೆ
ದಯಪಾಲಿಸಿದ್ದು, ನಾನು ಅರಮನೇ ಬಿಟ್ಟು ಬರುವಾಗ ಮಾಡಿದ
ಶಪಥ ಪೂರ್ತಿಯಾಯಿತು, ಮುಖ್ಯವಾಗಿ ನನ್ನ ಪಾತಿವ್ರತ್ಯ
ವನ್ನು ಕಾಪಾಡಿಕೊಂಡಿದೇನೆ ; ಹೀಗೆಂದು ಆ ರಾಣಿಯು
ನುಡಿದು ತನ್ನ ಇಬ್ಬರು ಗಂಡು ಮಕ್ಕಳನ್ನೂ ನೋಡಿ ಕಂಣಿ
ನಲ್ಲಿ ನೀರಹಾಕುತಾ—ಎಲ ಮಕ್ಕಳಿರಾ, ನಿಮ್ಮ ತಂದೆಗಳಿಗೆ
ನಮಸ್ಕಾರ ಮಾಡಿಯಪ್ಪ ಎಂದು ಹೇಳಿದಳು. ಆ ಮಂಚದ
ಎದುರಿಗೆ ಕಟ್ಟಿದ್ದ ನಿಲುಗನ್ನಡಿಯಲ್ಲಿ ತನ್ನ ಮುಖ ಕಾಣಿಸಲು
ಅದಕ್ಕೂ ತನಗೆ ಸಾಷ್ಟಾಂಗವೆರಗಿ ತನ್ನ ಎದುರಿಗೆ ಕೈಮುಗಿದು

ಆ
ತರುವ
ಮಾಡಿಸಿ

ಕೊಂಡು ನಿಂತಿದ್ದ ವರ್ತಕ ವೇಷಧಾರಿಗಳಾಗಿದ್ದ ಯುವ್ವನಸ್ಥರ ಮುಖಕ್ಕೂ ವ್ಯತ್ಯಾಸವಿಲ್ಲದ್ದನ್ನು ಕಂಡು ರಾಜನು ಆನಂದ ಬಾಷ್ಪ ವನ್ನು ಸುರಿಸುತಾ ತನ್ನ ಪತ್ನಿಯಾದ ಚೆಲುವಾಜಿಯನ್ನೂ ತನ್ನ ಇಬ್ಬರು ಗಂಡು ಮಕ್ಕಳನ್ನೂ ತಬ್ಬಿಕೊಂಡು ಸಂತೋಷಸಾಗರದಲ್ಲಿ ಮುಳುಗಿ, ಆನೇ ಮೇಲೆ ಅಂಬಾರಿ ಹಾಕಿಸಿ ಅದರಲ್ಲಿ ತಾನೂ ಆ ಚೆಲುವಾಜಿ ರಾಣಿಯೂ ಆ ಇಬ್ಬರು ರಾಜಪುತ್ರರೊಡಗೂಡಿ ಕೂತುಕೊಂಡು ವಿಶೇಷ ವೈಭವದಿಂದ ಅರಮನೆಗೆ ದಯಮಾಡಿ ಆನಂದ ಭರಿತನಾಗಿದ್ದನು. ಮತ್ತು ಮಂತ್ರಿಯು ಆಗಾಗ್ಗೆ ಆಡುತಾ ಇದ್ದ ಸಂದಿಗ್ಧವಾದ ಮಾತುಗಳೆಲ್ಲಾ ಈಗ ಅರ್ಥವಾಗುತಾ ಇವೆ, ಆತನು ದೂರ ದೃಷ್ಟಿಯಿಂದ ಮಾಡಿದ ಕಾರ್ಯದಿಂದ ನಮ್ಮ ವಂಶ ಉದ್ಧಾರವಾಯಿತು, ಅನೇಕ ಅಪಕೀರ್ತಿಯೂ ಪಾಪವೂ ನಮ್ಮನ್ನು ತಟ್ಟದ ಹಾಗಾಯಿತು. ಹೀಗೆಂದು ಹೇಳಿ ದೊರೆಯು ಮಂತ್ರಿಗೆ ವಿಶೇಷ ಮರ್ಯಾದೆ ಮಾಡಿದನೆಂಬಲ್ಲಿಗೆ " ಪೇಟೆ ಮಾತೇನಜ್ಜಿ " ಎಂಬ ಗ್ರಂಥಕ್ಕೆ ಮಂಗಳಂ ಮಹಾ ಶ್ರೀಶ್ರೀಶ್ರೀ ||

ನುಗ್ಗಿ ಬರಬಹುದು; ಕಳ್ಳರಾದರೆ ಕದ ತಟ್ಟಿ ಬಾಗಿಲಲ್ಲಿ ಕೂಗು ವುದಿಲ್ಲ; ಕಳ್ಳರು ಕಳ್ಳದಾರೀ ಮಾಡಿಕೊಂಡು ಹೇಗಾದರೂ ಬರಬಲ್ಲರು; ಕಾಡುಜನರಾಗಲಿ ಅಥವಾ ಇತರರು ಯಾರೇ ಆಗಲಿ ಈ ಕುಂಭದ್ರೋಣದ ಮಳೆಯಲ್ಲಿ ನೆನೆದುಕೊಂಡು ಬಂದಿದಾರೆ, ದೋಣಿಯ ಮೇಲೆ ಬಂದು ಈ ತುಫಾನಿನಲ್ಲಿ ಮುಂದಕ್ಕೆ ಹೋಗಲಾರದೆ ಇಲ್ಲಿ ಇಳಿದು ಬಂದರೋ, ಹಡಗು ಒಡೆದುಹೋಗಿ ಇವರು ಪ್ರಾಣವನ್ನು ಉಳಿಸಿಕೊಂಡು ಬಂದರೋ, ಹೇಗಾದರೂ ಇರಲಿ ಬಾಗಿಲ ತೆಗೆ, ಪ್ರಾಣಿಮಾತ್ರ, ಯಾರಾದ ರೇನು? ಬಾಗಿಲ ತೆಗೆ ಎಂದಳು. ಬಾಗಿಲ ತೆಗೆದರು. ನೋಡಿ ಯಾರೆ ದೊರೆ, ಉಳಿದ ಇಬ್ಬರು ಕೈಸದ್ದಕದ ಅಂಗರಕ್ಷಕರು, ಅವರು ಮೂರು ಜನರೂ ನೀರು ಸೋರುತಾ ಇರುವ ಬಟ್ಟೆಯೊಡನೆ ಚಳಿ ಯಲ್ಲಿ ಗಡಗಡನೆ ನಡಗುತಾ ತುಟಿಹಲ್ಲು ಅಲಗುತಾ ಒಳಕ್ಕೆ ಬಂದು ನಿಂತುಕೊಂಡರು. ಅವರ ಸ್ಥಿತಿಯನ್ನು ನೋಡಿದರೆ ಬಹು ವಾಗಿ ಕನಿಕರ ಹುಟ್ಟುವಹಾಗಿತ್ತು. ಯಜಮಾನಿಯು ಈಚೆಗೆ ಮುಖತೋರಿಸದೆ ಒಳಗೆಯೇ ಇದ್ದುಕೊಂಡು ದಾದಿಯ ಸಂಗಡ ಪಿಸಿ ಮಾತನಾಡಿ ಕಳುಹಿಸಿದಳು. ದಾದಿಯು ಅದರಂತೆ ಒಣ ಗಿದ ಬಟ್ಟೆಯನ್ನು ಅವರಿಗೆ ಕೊಟ್ಟು ದೊಡ್ಡ ಅಗ್ಗಿಷ್ಟಿಗೆಯಲ್ಲಿ ಬೆಂಕಿಯನ್ನು ಆ ಜನರಮುಂದೆ ತಂದಿರಿಸಿ ಅವರಿಗೆ ಎತ್ತರವಾದ ಆಸನವನ್ನು ತಂದುಹಾಕಿ ಅದರಮೇಲೆ ಅವರನ್ನು ಕೂರಿಸಿದಳು. ತರುವಾಯ ಬಿಸಿನೀರಿನ ಸ್ನಾನವನ್ನೂ ಒಳ್ಳೇ ಭೋಜನವನ್ನೂ ಮಾಡಿಸಿ ದೊರೆಗೆ ಮಂಚದಮೇಲೆ ಹಾಕಿದ ಸುಪ್ಪತ್ತಿಗೆಯನ್ನೂ

ತಕ್ಕ ಹೊದಿಕೆಯನ್ನೂ, ಊಳಿಗದವರಿಗೆ ತಕ್ಕ ಹಾಸಿಗೆಯನ್ನೂ ಸಿದ್ಧಮಾಡಿದಳು. ಬಹು ಆಯಾಸಪಟ್ಟು ಬಂದಿದ್ದ ಅವರು ಮೂರು ಜನಕ್ಕೂ ಇನ್ನೇನೂ ಬೇಕಾಗಿರಲಿಲ್ಲ, ನಿದ್ರೆ ಚೆನ್ನಾಗಿ ಬಂತು. ಮಾರನೇದಿವಸ ಮಧ್ಯಾಹ್ನ ಭೋಜನವಾದ ತರುವಾಯ ಕೃತಸಂಕೇತದಮೇಲೆಯೋ ಎನ್ನುವಹಾಗೆ ಚಾರರೂದಾದಿಯೂ ಬೇರೆ ಸ್ಥಳದಲ್ಲಿರುವ ಸಮಯ ನೋಡಿ ದೊರೆಯು ತನಗೆ ಹುಟ್ಟಿದ ಅನುಮಾನವನ್ನು ಪರಿಹಾರ ಮಾಡಿಕೊಳ್ಳುವುದಕ್ಕಾಗಿ ಕತ್ತಿ ತ್ತಿ, ಕಿರುಮನೆಯ ಒಳಬಾಗಿಲಲ್ಲಿ ತನ್ನ ಮುಖವನ್ನು ಅರೆಅರೆಯಾಗಿ ತೋರಿಸುತಾ ಹಾಗೆಯೇ ಕತ್ತನ್ನು ಒಳಕ್ಕೆ ಎಳೆದುಕೊಳ್ಳುತಾ ನಿಂತಿದ್ದ ಮನೆಯ ಯಜಮಾನಿಯನ್ನು ಕುರಿತು

ದೊರೆ—ನಾವು ನಿನ್ನೆ ಪಟ್ಟ ಕಷ್ಟವೆಲ್ಲಾ ನೀವು ಮಾಡಿದ ಉಪಚಾರದಿಂದಲೂ, ಸತ್ಕಾರದಿಂದಲೂ ಪರಿಹಾರವಾಯಿತು. ನನಗೆ ಒಂದು ಸಂಶಯವಿದೆ. ನೀವು ಒಂಟಿಯಾಗಿ ಈ ಹಾಳದ್ವೀಪಕ್ಕೆ ಬಂದದ್ದು ಹೇಗೆ? ಎಲ್ಲಿಂದ ಬಂದಿರಿ? ನೀವು ಯಾರು? ನಿಮ್ಮನ್ನು ನಾನು ಚೆನ್ನಾಗಿ ನೋಡಿದ ಜ್ಞಾಪಕವಿದೆ.

ಯಜಮಾನಿ—ನಮ್ಮ ಸ್ಥಿತಿಯನ್ನು ನೋಡಿದರೆ ಅನುಮಾನ ಹುಟ್ಟತಕ್ಕದ್ದೇನೋ ಸಹಜ. ನಮ್ಮ ಲಲಾಟಲೇಖನವು ನಮ್ಮನ್ನು ಇಲ್ಲಿಗೆ ಎಳೆದುತಂದಿತು. ನಮ್ಮ ಊರು ಗೋಪಾಲಪುರ. ನಾನು ಆ ವೂರಿನಲ್ಲಿ ಭಾರಿಯಾಗಿ ಹಡಗಿನ ವ್ಯಾಪಾರ ಮಾಡತಕ್ಕ ಒಬ್ಬ ದೊಡ್ಡ ಸಾಹು

ಕಾರನ ಮಗಳು. ನಮ್ಮ ತಂದೆಯು ನನ್ನನ್ನು ಸ್ಪಸಿ: ಬಾರ್ ದೊರೆಗೆ ಕೊಟ್ಟು ದುಮವೆ ಮಾಡುವುದಾಗಿ ಹೇಳಿದನು. ರಾಕ್ಷಸಸ್ವರೂಪವಾಗಿ ನನ್ನ ಕಣ್ಣಿಗೆ ಕಾಣಿಸಿದ ಆ ಪುರುಷನನ್ನು ನಾನು ಮದುವೆಯಾಗಲೊಲ್ಲೆ; ನನ್ನ ಮನಸ್ಸು ಒಪ್ಪಿದವರನ್ನು ನಾನೇ ಚುನಾಯಿಸಿಕೊಳ್ಳುತೇನೆ, ಉಳಿದ ಗಂಡಸಿನ ಸಂಗಡ ನಾನು ಮಾತನಾಡುವುದೂಕೂಡ ಇಲ್ಲ ಎಂದೆ. ಇದಕ್ಕೆ ನಮ್ಮ ತಂದೆಯು ಕುಪಿತನಾಗಿ ನಿರ್ಮಾನುಷ್ಯ ಪ್ರದೇಶವಾಗಿ ಪರಪುರುಷರ ಮುಖಾವಲೋಕನಕ್ಕೆ ಸಾಧ್ಯವಿಲ್ಲದಂಥಾ ಈ ದ್ವೀಪಕ್ಕೆ ನನ್ನನ್ನು ಇಬ್ಬರು ದಾದಿಯರೊಡಗೊಡಿ ಕಳುಹಿಸಿಬಿಟ್ಟನು. ನಮ್ಮ ಜೀವನಕ್ಕೆ ಬೇಕಾಗುವ ಸಾಮಾನು ವಿಶಿಷ್ಟವನ್ನೂ ಮೂರು ತಿಂಗಳಿಗೆ ಒಂದುಸಾರಿ ನಾವಿಕರ ಸ್ತ್ರೀಜನರ ಮೂಲಕ ಇಲ್ಲಿಗೆ ಕಳುಹಿಸುತಾರೆ. ಪ್ರಾಮಾಣಿಕಳಾಗಿ ನಾನು ಆಡಿದ ಮಾತಿಗೆ ಈ ಒಂಟಿ ಸೆರೆ ಪ್ರಾಪ್ತವಾಯಿತು.

ದೊರೆ—(ಇದನ್ನು ಕೇಳಿ ಮನಸ್ಸು ಬಹಳ ಕಳವಳಗೊಂಡು) ಹಾಗಾದರೆ ಈಗ ನನ್ನ ಮುಖವನ್ನು ನೋಡಿದ್ದರಿಂದ ನಿಮ್ಮ ತಂದೆ ಮಾಡಿದ ಕಟ್ಟು ಹೋದಹಾಗಾಯಿತಲ್ಲಾ.

ಯಜಮಾನಿ—ಇದು ಅಕಸ್ಮಾತು ಸಂಭವಿಸಿದ ವಿಚಾರ.

ದೊರೆ—ಶುಭಾಶುಭೋದಯಗಳು ಆಕಸ್ಮಾತ್ತಾಗಿ ಸಂಭವಿಸುವವು, ನೀವು ಪ್ರಾಪ್ತವಯಸ್ಕರಾದಾಗ್ಯೂ ಈ ಸ್ಥಿತಿಯಲ್ಲಿರುವುದು

ಸಹಜ ಧರ್ಮವಲ್ಲ.

ಯಜಮಾನಿ—ಪೂರ್ವಾರ್ಜಿತ ಕರ್ಮಕ್ಕೆ ನಿವಾರಣೆಯೇನಿದೆ ? ಅನುಭವಿಸಬೇಕು.

ದೊರೆ—ಅಂಥಾ ಪ್ರಾರಬ್ಧಕರ್ಮನಿವಾರಣೆಯಾಗಲು ಈಗ ಸಮಯ ಸರಿಯಾಗಿದೆಯಷ್ಟೆ ?

ಯಜ—ಮದುವೆಯಾದರೆ ನೀನು ಒಬ್ಬ ದೊರೆಯನ್ನೇ ವರಿಸಬೇಕು ಎಂದು ನನ್ನ ತಂದೆ ನಿರ್ಭಂಧ ಮಾಡಿದಾನೆ. ಅದನ್ನು ಮೀರಲು ಸಾಧ್ಯವಿಲ್ಲ.

ದೊರೆ—ಹಾಗಾದರೆ ನಿಮ್ಮ ತಂದೆ ಮಾಡಿದ ಶಪಥ ಈಗ ಸಾಗಿದಂತಾಗುವುದು.

ಯಜ—ಅದು ಹೇಗೆ ?

ದೊರೆ—ನಾನು ಮಾನಸಪುರದ ದೊರೆ.

ಯಜ—ತಾವು ಅಪ್ಪಣೇ ಕೊಡಿಸಿರುವ ರೀತಿಯಿಂದ ತಮ್ಮ ಅಭಿಪ್ರಾಯ ತಿಳಿಯಿತು. ನಮ್ಮ ತಂದೆಯ ಅಪ್ಪಣೆಯನ್ನು ನಾನು ಪಡೆಯಬೇಕಾದ್ದು ಧರ್ಮವಲ್ಲವೆ ?

ದೊರೆ—ವಧೂವರರ ಮನಸ್ಸು ಏಕೀಭವಿಸಿರುವಾಗ ಜರುಗಬಹುದಾದ ಗಾಂಧರ್ವ ವಿವಾಹಕ್ಕೆ ಅನ್ಯರ ಅನುಮತಿ ಅಗತ್ಯವೆಂಬ ಯೋಚನೆಯು ಆ ವಿವಾಹ ಧರ್ಮಕ್ಕೆ ವಿರುದ್ಧವಾಗುವುದು. ಅದರೆ ಒಬ್ಬ ದೊರೆಯನ್ನೇ ನೀವು ಮದುವೆಯಾಗಬೇಕೆಂದು ಮಾಡಿದ್ದ ಅಪ್ಪಣೆಯಂತೆ ಈಗ ಜರುಗುವಕಾರಣ ನಿಮ್ಮ ತಂದೆಯು ಇದಕ್ಕೆ ಮೊದಲೇ ಒಪ್ಪಿದಂತಾಯಿತು.

ಯಜ—ತಮ್ಮ ಭೇಟಿಯನ್ನು ಮಾಡುವುದಕ್ಕೆ ಮುಂಚೆಯೇ ತಮ್ಮನ್ನು ನಾನು ಮದುವೆ ಮಾಡಿಕೊಳ್ಳಲೆಂದು ನಮ್ಮ ತಂದೆ ಒಪ್ಪಿದ್ದನೆಂಬ ಮಾತು ಕೇವಲ ಚಮತ್ಕಾರೋಕ್ತಿ ಯಾಯಿತು.

ದೊರೆ—ಒಬ್ಬ ದೇಶಾಧಿಪತಿಯನ್ನು ವಿವಾಹವಾಗಬೇಕೆಂದು ಮಾಡಿದ್ದ ನಿಬಂಧನೆ ಈಗ ಸಾಗುವುದಾದ ಕಾರಣ, ಈ ನಮ್ಮುಭಯರ ಸಂಘಟಣೆಗೆ ಆತ ತಪ್ಪಿದಂತಾಯಿತಲ್ಲವೆ?

ಅಗ ಆ ಯಜಮಾನಿಯು ನಸುನಗುತಾ—ನಾನು ಹೆಂಗಸು ಈ ಅರ್ಥಗಳನ್ನೆಲ್ಲಾ ನಾನೇನು ಬಲ್ಲೆ? ಎನಲು, ದೊರೆಯು ಅವಳ ಕೈಯನ್ನು ತಟ್ಟನೆ ಎದ್ದು ಹಿಡಿದುಕೊಂಡು—ಇನ್ನು ನಮನಮಗೆ ವಿವಾಹವಾದಂತೆ ಭಾವಿಸಬೇಕು ಎಂದು ಹೇಳಿ ಮುಂದಕ್ಕೆ ನುಡಿದದ್ದೇನೆಂದರೆ :—

ದೊರೆ—ಇದಕ್ಕೆ ಮುಂಚೆ ನಿಮ್ಮನ್ನು ಎಲ್ಲಿಯೋ ಚೆನ್ನಾಗಿ ನೋಡಿದ ಹಾಗಿದೆಯಲ್ಲಾ.

ಯಜ—ತಾವು ದೊರೆಗಳು, ಅನೇಕರನ್ನು ನೋಡಿರಬಹುದು. ಒಂದೊಂದು ವೇಳೆ ಒಬ್ಬರ ಮುಖದ ಹಾಗೆ ಒಬ್ಬರ ಮುಖವಿರಬಹುದು. ನಾವು ನಿಮ್ಮ ಸಂಸ್ಥಾನಕ್ಕೆ ಬಂದ ವರಲ್ಲ.

ದೊರೆ—(ಆತ್ಮಗತವಾಗಿ—ಮಂತ್ರಿ ಕೊಂದುಹಾಕಿಸಿದ ನನ್ನ ಹೆಂಡತಿಗೂ ಇವಳಿಗೂ ವಿಶೇಷ ಹೋಲಿಕೆ ಇದೆಯಲ್ಲಾ! ಇದು ಆಶ್ಚರ್ಯ, ಎಂದುಕೊಂಡು) ನನಗೆ ವಿಸ್ಮೃತಿ

ಬಂದು ಕೇಳಿದೆ, ನನ್ನ ಮಾತನ್ನು ಮನಸ್ಸಿಗೆ ತಂದು
ಕೊಳ್ಳಬೇಡಿ.

ಈ ಪ್ರಕಾರ ದೊರೆಯು ಹೇಳಿ ಸಮಾಧಾನಗೊಳಿಸಿ ಅ
ಹೆಂಡತಿಯಲ್ಲಿ ಸುಖವಾಗಿ ಮೂರು ದಿವಸ ಇದ್ದು ತರುವಾಯ
ತನ್ನ ದೇಶಕ್ಕೆ ಹೊರಡಲು ಸಿದ್ಧವಾದನು. ಮತ್ತು ಅ
ಅಲ್ಲಿ ತನಗೆ ಆದ ಉಪಚಾರಕ್ಕೂ ತಾನು ಹೊಂದಿದ ಸತ್ಕಾ
ರಕ್ಕೂ ದೊರೆಯು ಕೇವಲ ಆನಂದಭರಿತನಾಗಿ ಆ ಸ್ತ್ರೀಯನು
ಕುರಿತು—ನೀವು ಒಳ್ಳೇ ಸಮಯದಲ್ಲಿ ಮಾಡಿದ ಸತ್ಕಾರವ
ಯಾವ ಪ್ರತ್ಯುಪಕಾರದ ಔನ್ನತ್ಯಕ್ಕಿಂತಲೂ ಹೆಚ್ಚಿನ ಅಂತಸ್ತು
ಉಳ್ಳದ್ದಾಗಿದೆ, ಆದಾಗ್ಯೂ ತಮಗೆ ಸದ್ಯದಲ್ಲಿ ನನ್ನ ಜ್ಞಾಪಕಾ
ರ್ಥವಾಗಿ ಏನು ಬೇಕು ? ಎಂದು ಕೇಳಿದನು. ಇದಕ್ಕೆ ಆ
ಗರತಿಯು—ನಾನಾಗಿ ಬೇಡಿಕೊಳ್ಳಬೇಕೆಂದು ಯೋಚಿಸುತ
ಇದ್ದ ವಿಷಯವನ್ನು ತಾವಾಗಿ ತೆಗೆದ ಕಾರಣ ನಮ್ಮುಭಯ
ಮನಸ್ಸು ಚನ್ನಾಗಿ ಕಲೆಯಿತೆಂದು ಹೇಳಲು ಸಂಶಯವಿಲ್ಲ. ತಮ್ಮ
ಗುರುತಿಗಾಗಿ ತಾವು ಧರಿಸಿರುವ ವಸ್ತ್ರಗಳು ಉಂಗುರ ಮೊದ
ಲಾದ ಆಭರಣಗಳು ಇವುಗಳೆಲ್ಲವನ್ನೂ ನನಗೆ ಅಪ್ಪಣೇಕೊಡಿಸ
ಬೇಕು, ಎಂದಳು. ದೊರೆಯು ಈ ಮಾತಿಗೆ ಸಂತೋಷಪಟ್ಟು
ಆ ಸ್ತ್ರೀಯು ಆಶೆಭಾಧಕಳಲ್ಲ ಅಲ್ಪದರಲ್ಲಿಯೇ ತೃಪ್ತಳಾಗತಕ್ಕ
ವಳು ಎಂದು ತಿಳಿದುಕೊಂಡು, ಅವಳು ಕೇಳಿದ್ದನ್ನೆಲ್ಲಾ ಸಂತೋ
ಷವಾಗಿ ತೆಗೆದುಕೊಟ್ಟನು. ಆದರೆ ಆತರುಣಿಯನ್ನು ಕುರಿತು—
ನಿಮ್ಮಿಂದ ನಾವು ಎಷ್ಟೋ ಉಪಕಾರವನ್ನು ಹೊಂದಿದೆವು ; ಇಂಥಾ

ನಿರ್ಮಾನುಷ್ಯವಾದ ಸ್ಥಳದಲ್ಲಿ ನಮ್ಮ ಕ್ಷೇಮಕ್ಕಾಗಿ ದೇವರೇ ತಮ್ಮನ್ನು ತಂದು ಇಲ್ಲಿರಿಸಿದ್ದನೆಂದು ನಾವು ತಿಳಿಯುತೇವೆ. ನೀವು ಇಲ್ಲಿಲ್ಲದಿದ್ದರೆ ಈ ನಡುಗಡ್ಡೆಯ ಕಾಡಿನಲ್ಲಿ ಕ್ಷುತ್ತಿನಿಂದ ನಾವು ಲೋಕಾಂತರವನ್ನು ಹೊಂದಬೇಕಾಗಿತ್ತು. ನಿಮ್ಮ ಆತಿಥ್ಯದಿಂದ ನೀವು ಪ್ರಾಣದಾನವನ್ನು ಮಾಡಿದಿರಿ. ಇದು ಒಂದು ಕೋಟಿ ಎಂದು ಭಾವಿಸಬೇಕಾಗಿದೆ. ಇನ್ನು ಹೆಚ್ಚಾಗಿ ಹೇಳಲಾರೆ, ಇದ ಕ್ಕಾಗಿ ನೀವು ಕೇಳತಕ್ಕ ಅಲ್ಪಪದಾರ್ಥವು ಗಣನೀಯವಾದ್ದೇ ಅಲ್ಲ, ಆದರೆ ಒಂದು ವಿಚಾರದಲ್ಲಿ ಮಾತ್ರ ನಾನು ಅಪಚಾರ ಪಡಬೇ ಕಾದ ಸಂದರ್ಭವಿದೆ. ನಾನು ಇಟ್ಟಿರುವ ಮುದ್ರೆ ಉಂಗುರವು ರಾಜ್ಯಭಾರದ ಕಾಗದಗಳು ಮೊದಲಾದ್ದಕ್ಕೆ ಹಾಕತಕ್ಕ ಮುದ್ರೆ ಯದಾಗಿದೆ. ಇದು ಹೊರತು ನಿಂತದ್ದೆಲ್ಲವನ್ನೂ ಕೊಡುತೇನೆ ಎಂದನು. ಇದಕ್ಕೆ ಆ ಅಬಲೆಯು ತಮ್ಮ ಉಂಗುರವೇ ಒಂದು ತೂಕ ನಿಂತದ್ದೆಲ್ಲಾ ಒಂದು ತೂಕ; ಅದನ್ನು ತಾವು ದಯಪಾಲಿ ಸದೇ ಹೋದರೆ, ಇನ್ನೇನು ಕೊಟ್ಟರೂ ಪ್ರಯೋಜನವಿಲ್ಲ; ಎಂದು ನುಡಿದಳು. ಆಗ ರಾಜನು ಆ ಸ್ತ್ರೀರತ್ನದ ಮೇಲಿನ ಅಭಿಮಾನ ದಿಂದ ತನ್ನ ಮುದ್ರೆ ಉಂಗುರವನ್ನೂ ತೆಗೆದುಕೊಟ್ಟು ಅವಳನ್ನು ಸಮಾಧಾನ ಮಾಡಿ ತನ್ನ ಪಟ್ಟಣಕ್ಕೆ ತೆರಳಿದನು.

೭ನೇ ಅಧ್ಯಾಯ.

ಕೆಲವು ವರುಷಗಳು ಕಳೆದ ತರುವಾಯ ಮಾನಸಪುರಕ್ಕೆ ಇಬ್ಬರು ವರ್ತಕರು ಬಂದರು. ಈ ಇಬ್ಬರು ಸಹೋದರರಿಗೂ

ವಯಸ್ಸು ಹೆಚ್ಚಾಗಿರಲಿಲ್ಲ. ಆದರೂ ಇವರು ತುಂಬಾ ಬೆಳವಳಿಗೆಯುಳ್ಳವರಾಗಿ ಶಕ್ತರಾಗಿ ಒಂದೇ ವಯಸ್ಸಿನವರ ಹಾಗೆ ಕಾಣಿಸುತಿದ್ದರು. ಇವರು ಆ ವೂರಿಗೆ ಬಂದು ಭಾರಿಯಾಗಿರುವ ಒಂದು ಉಪ್ಪರಿಗೆ ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ಅದಕ್ಕೆ ಎದುರಾಗಿದ್ದ ಒಬ್ಬ ಅಡಗೂಲಜ್ಜಿಯ ಮನೆಯಲ್ಲಿ ಒಂದಕ್ಕೆ ಎರಡರಷ್ಟು ಕೂಲೀ ಕೊಟ್ಟು ಭೋಜನ ಮಾಡಿಕೊಂಡು ಆ ವೂರ ಚಿನವಾರಕಟ್ಟೆಗೆ ಪ್ರತಿನಿತ್ಯವೂ ಹೋಗುತಾ ರತ್ನಪಡಿ ಒಡವೆಗಳನ್ನು ಕೊಂಡುಕೊಳ್ಳುತಾ ಅವುಗಳನ್ನು ತಮಗೆ ವೂರಟೆಯಾಗುವಂತೆ ಮಾರುತಾ ಜನರಲ್ಲಿ ವಿಶೇಷವಾಗಿ ಬಳಕೆಯನ್ನೂ, ಸ್ನೇಹವನ್ನೂ ಸಂಪಾದನೆ ಮಾಡಿಕೊಂಡು ಅಲ್ಲಿ ನಿಂತರು.

ಒಂದಾನೊಂದು ದಿವಸ ಇವರಿಬ್ಬರೂ ಊಟಾ ಮಾಡುತಾ ಕುಳಿತಿರುವಾಗ ಅಡಿಗೂಲಜ್ಜಿಯನ್ನು ಕುರಿತು

ವರ್ತಕರು—ಅಜ್ಜಿ, ಪೇಟೆಮಾತೇನಜ್ಜಿ ?

ಅಜ್ಜಿ—ಅಯ್ಯೋ, ಈ ವೂರ ಸಮಾಚಾರವನ್ನು ಏನೆಂದು ಹೇಳಲಿ. ನಿನ್ನೇ ರಾತ್ರೆ ಯಾರೋ ಕಳ್ಳರು ಅರಮನೆಗೆ ಕನ್ನ ಹಾಕಿ, ಅಂತಃಪುರದಲ್ಲಿ ಮಲಗಿದ್ದ ರಾಣಿಯು ಇಟ್ಟುಕೊಂಡಿದ್ದ ವಜ್ರದ ಮೂಗುಬಟ್ಟನ್ನು ಕದ್ದುಕೊಂಡು ಹೋದರಂತೆ; ಇದು ಬೆಳಗಾದಮೇಲೆ ದೊರೆಗೆ ತಿಳಿಯಿತು. ಈ ಕಳವು ಮಾಡಿದವರನ್ನು ಕಂಡುಹಿಡಿಯಲು ಕಳ್ಳಬಂಟರನ್ನು ಬಿಟ್ಟಿದಾರಂತೆ; ಅವರು ಈ ವೂರಿಗೆ ಬಂದ ಹೊಸ

ಜನರನ್ನೆಲ್ಲಾ ಹುಡುಕುತಾ ಇದಾಳಂತೆ; ನೀವು ಎಲ್ಲಿಯೂ ಹೊರಕ್ಕೆ ಹೋಗಬೇಡಿಯಪ್ಪ.

ವರ್ತಕರು—ಅಜ್ಜಿ, ನೀನು ಹೇಳಿದ್ದನ್ನು ಕೇಳಿ ನನುಗೆ ಈಗಲೇ ಭಯವಾಗಿದೆ, ನಾವು ಆ ಗೋಜಿಗೆಲ್ಲಾ ಹೋಗುವುದಿಲ್ಲ. (ಎರಡು ಮೂರು ದಿವಸ ಕಳೆಯಿತು. ಪುನಃ ಒಂದು ದಿವಸ ಭೋಜನಾ ಮಾಡುವಾಗ)

ಮುತ್ಯಾಲ ಸೆಟ್ಟಿ—ಪೇಟೆಮಾತೇನಜ್ಜಿ ?

ಅಜ್ಜಿ—ಅಯ್ಯೋ, ಮಕ್ಕಳ, ನಾನು ಏನಹೇಳಲಿ ? ನಿನ್ನೇ ರಾತ್ರಿ ದೊರೆಯು ತನ್ನ ಬೆರಳಿಗೆ ಇಟ್ಟುಕೊಂಡು ಅಂತಃಪುರದಲ್ಲಿ ಮಲಗಿದ್ದ ಉತ್ತಮವಾದ ಒಂದು ವಜ್ರದ ಉಂಗುರ ವನ್ನು ಯಾರೋ ಕಳಚಿಕೊಂಡು ಹೋದರಂತೆ, ಅಂತಃ ಪುರದ ಶಯನಗೃಹಕ್ಕೆ ಯಾರೋ ಕಳ್ಳರು ಕೆಳಗಿನಿಂದಲೇ ಕನ್ನ ಹಾಕಿದಾರಂತೆ. ಈ ಕಳ್ಳರು ಸಾಧಾರಣರಲ್ಲ. ಇವ ರನ್ನು ಹಿಡಿಯಲೇಬೇಕೆಂದು ಕಳ್ಳಬಂಟರಿಗೆ ದೊರೆಯು ಅಪ್ಪಣೇ ಮಾಡಿದಾನಂತೆ. ನೀವು ರಾತ್ರಿ ಹೊತ್ತು ಎಲ್ಲಿ ಯೂ ಹೊರಗೆ ತಿರುಗಾಡಬೇಡಿ, ಮಕ್ಕಳ.

ಮುತ್ಯಾಲಸೆಟ್ಟಿ—ಮನೆಯನ್ನು ಬಿಟ್ಟು ನಾವು ಎಲ್ಲಿಯೂ ಪದ ಚಲನ ಮಾಡುವುದಿಲ್ಲ, ಅಜ್ಜಿ. (ಈ ರೀತಿಯಾಗಿ ಈ ಮಾತು ನಡೆದ ತರುವಾಯ ಮಾರನೇ ದಿವಸ ಮಧ್ಯಾನ್ಹದ ಊಟ ಮಾಡುತಾ ಕೂತಿರುವಾಗ,)

ಪಗಡಾಲಸೆಟ್ಟಿ—ಈ ದಿವಸದ ವಿಶೇಷ ವರ್ತಮಾನವೇನಜ್ಜಿ ?

ಅಜ್ಜಿ—ಅಯ್ಯೋ ಕಂದಗಳಿರಾ, ನಾನು ಏನೆಂದು ಹೇಳಲಿ? ನಿನ್ನೆ ರಾತ್ರೆ ಕಳ್ಳರನ್ನು ಹಿಡಿಯುವುದಕ್ಕೆ ಹೋಗಿದ್ದ ಠಾಣೇದ ಗುರಿಕಾರನು ಊರಲ್ಲಿ ಕೋಟುಗಸ್ತಿ ತಿರುಗುತಿರುವಾಗ್ಗೆ ಕಳ್ಳರು ಅವನನ್ನು ಹಿಡಿದುಕೊಂಡು ಚಾವಡಿ ಕಂಬಕ್ಕೆ ಕಟ್ಟಿ ಹಾಕಿ ಅವನ ಬಾಯಿಗೆ ಚಂಡನ್ನು ಗಿಡಿದು ಹೊರಟುಹೋಗಿ ದಾರಂತೆ; ಈ ಕಳ್ಳರು ಬಹಳ ತುಂಟರಾಗಿದಾರಾದ್ದರಿಂದ ಬಹು ಚತುರೆಯಾದ ದೊರೆಯ ಸೂಳೆಯು ಈ ದಿವಸ ರಾತ್ರೆ ಕಳ್ಳರನ್ನು ಹಿಡಿಯುವುದಕ್ಕೆ ಹೊರಡುತಾಳಂತೆ; ನೀವು ರಾತ್ರೆ ಎಲ್ಲಿಯೂ ಸಂಚಾರ ಹೋಗಬೇಡಿಯಪ್ಪ.

ಪಗಡಾಲಸೆಟ್ಟಿ—ಆ ಗೋಜು ನಮಗೆ ಯಾಕೆ ಅಜ್ಜಿ?

(ಇಬ್ಬರು ಸೆಟ್ಟಿಗಳೂ ಹೀಗೆ ಹೇಳಿ ಮನೆಗೆ ಹೊರಟು ಹೋದರು. ಆ ರಾತ್ರೆ ಕಳೆಯಿತು. ಮಾರನೇ ದಿವಸ ಮಧ್ಯಾನ್ಹ ಎಂದಿನಂತೆ ಅಣ್ಣ ತಮ್ಮಂದಿರಾದ ಉಭಯ ಸೆಟ್ಟಿಗಳೂ ಅಡಗೊಲಜ್ಜಿಯ ಮನೆಗೆ ಬಂದು ಊಟಮಾ ಡುತಾ ಕೂತಿರುವಾಗ,)

ಮುತ್ಯಾಲಸೆಟ್ಟಿ—ಅಜ್ಜಿ, ಈ ದಿವಸದ ವರ್ತಮಾನವೇನು? ನಿನ್ನೇ ರಾತ್ರೆ ಕಳ್ಳರನ್ನು ಹಿಡಿದರೆ?

ಅಜ್ಜಿ—ಅಯ್ಯೋ ನಿನ್ನೇ ರಾತ್ರೆ ಆದ ಹಗರಣವನ್ನು ಏನೆಂದು ವಿವರಿಸಲಿ? ಆ ಸೂಳೆಯು ಬಹು ಚತುರಳು, ರಾತ್ರೇ ಕಾಲದಲ್ಲಿ ಕಳ್ಳರಿಗೆ ಬೇಕಾದ ತೀನೆಯನ್ನು ಕೊಂಡು ಕೊಳ್ಳಲು ಅಂಗಡಿಯೆಲ್ಲಾ ಮುಚ್ಚಿರುತ್ತಾರೆ. ಆದ್ದರಿಂದ

ಆ ನಾಯಿಕಸಾನಿಯು ಹೊಗೇ ಸೊಪ್ಪು, ಅಡಕೆ, ಎಲೆ, ನೆಸ್ಯ, ಗುಡಾಖು, ಭಂಗಿ, ಇತರ ಚಿಲ್ಲರೇ ತಿಂಡೀ ಪದಾರ್ಥಗಳು, ಇವುಗಳನ್ನು ಅಂಗಡಿ ಇಟ್ಟುಕೊಂಡು ಕೂತುಕೊಂಡಳು. ಆ ಅಂಗಡಿಗೆ ಯಾರು ಬರುತಾರೆಯೋ ಅವರನ್ನು ಹಿಡಿದರೆ ಕಳ್ಳರು ಸಿಕ್ಕಿದಹಾಗೆಂದು ಗೊತ್ತುಮಾಡಿಕೊಂಡಳಂತೆ. ಅರ್ಧರಾತ್ರೆಯಾಯಿತು, ಸಮಸ್ತ ಪ್ರಾಣಿಗಳೂ ಗಾಢನಿದ್ರೆಯಲ್ಲಿ ಮಗ್ನರಾಗಿರುವಾಗ ಅವಳ ಅಂಗಡೀಬಳಿಗೆ ಅಕಸ್ಮಾತ್ತಾಗಿ ಒಬ್ಬ ಕಂಚುಕಿಯನ್ನು ಕರೆದುಕೊಂಡು ದೊರೆಯು ಸವಾರಿಯೇ ಬಂತು. ಅವಳು ಎದ್ದುನಿಂತುಕೊಂಡು ಕೈಮುಗಿದಳು. ಆಗ ದೊರೆಯು—ಇನ್ನೂ ಯಾವ ಕಳ್ಳರೂ ಬರಲಿಲ್ಲವೇ? ಎಂದು ಕೇಳಿದನು. ಅದಕ್ಕೆ ನಾಯಿಕಸಾನಿಯು—ಬುದ್ಧಿ, ಇನ್ನೂ ಯಾರೂ ಬಂದಿಲ್ಲ. ಇನ್ನೇನು ಬರಬಹುದುದಾದ ಹೊತ್ತು. ಅವರು ಬಂದಕೂಡಲೆ ಅವರನ್ನು ನಾನು ಹಿಡಿದುಬಿಡುತೇನೆ. ಇಷ್ಟು ಕೆಲಸಕ್ಕೆ ಸವಾರಿಯೇ ಇಲ್ಲಿನವರೆಗೆ ದಯಮಾಡಬೇಕಾದ ಅಗತ್ಯವೇನು? ಆಯಾಸವಾಗುವುದು, ಸವಾರಿ ಒಳಕ್ಕೆ ದಯಮಾಡಿಸಿ ಪವಡಿಸಿಕೊಳ್ಳಬಹುದು, ಎಂದು ಅವಳು ಹೇಳಿದಳು. ಆಗ ದೊರೆಯು ನೀನು ಕಳ್ಳರನ್ನು ಹೇಗೆ ಹಿಡಿಯುತೀಯೋ ನೋಡಬೇಕೆಂದು ಬಂದೆ, ನಾನೇ ಕಳ್ಳ, ನನ್ನನ್ನು ಹಿಡಿ, ನೋಡುತೇನೆ, ಎಂದು ಬಾಯಲ್ಲಿ ಹೇಳುತಾ, ದೊರೆಯು ತಕ್ಷಣದಲ್ಲಿ ಸೊಂಟದ

ಲ್ಲಿದ್ದ ಚೂರಿಯನ್ನು ಹಿರಿದು, ಅವಳ ಎರಡು ಮೂಗನ್ನೂ
ಮೇಲಿನಿಂದ ಕೆಳಗಿನವರೆಗೂ ಸೀಳಿಬಿಟ್ಟನು. ರೋಗ
ಬಂದ ಗಾರ್ಭಕ್ಕೆ ಮಡಿವಾಳಿಗಳು ಮೂಗನ್ನು ಸೀಳ
ದಂತಾಯಿತು. ಅದು ಮೂರು ಸೀಳಾಗಿ ನೇತಾಡುವು
ದಕ್ಕೆ ಆರಂಭವಾಯಿತು. ರಕ್ತ ವಿಶೇಷವಾಗಿ ಸುರಿಯುತಾ
ಬಂತು. ಜ್ಞಾನತಪ್ಪಿಹೋಗಿ ಆ ಸುಂದರಾಂಗಿಯು ಕೆಳಕ್ಕೆ
ಬಿದ್ದುಬಿಟ್ಟಳು. ಬೆಳಗಾದ ಮೇಲೆ ದೊರೆ ಇಟ್ಟು
ಕೊಂಡಿದ್ದ ಮೆಚ್ಚಿನ ದೇವಕನ್ನಿಕೆಗೆ ಆದ ಹಗರಣ ಊರ
ಲ್ಲೆಲ್ಲಾ ಹರಡಿಕೊಂಡಿತು. ದೊರೆಗೂ ವರದಿಯಾಯಿತು.
ಆತ ತಟ್ಟನೆ ತನ್ನ ಸೂಳೇಮನೆಗೆ ಬಂದು ಇದೇನು ಅಸಾ
ಹುತವೆಂದು ಕೇಳಲಾಗಿ, ಆ ವೇಶಿಯು—ತಾವೇ ಬಂದು
ನನ್ನ ವಿಚಾರಿಸುವ ನೆವದಿಂದ ಹತ್ತಿರ ನಿಂತು ನನ್ನ ಮೂ
ಗನ್ನು ನಿಮ್ಮ ಚೂರಿಯಿಂದ ಸೀಳಿ, ನಾನೇ ಕಳ್ಳ, ಹಿಡಿ
ಎಂದು ಹೇಳಿ, ಈಗ ವಿಚಾರಿಸುವುದಕ್ಕೆ ಬಂದಿರಿ? ಎಂದು
ಸೀಳಿಹೋದ ಮೂಗಿನಿಂದ ಜುೂಜುೂಜ ಎಂದು ಗೊಣಗಿ
ದಳು. ಇದನ್ನು ಕೇಳಿ ದೊರೆಯು ಸತ್ಯವಾಗಿ ತಾನು
ಬಂದವನಲ್ಲ, ತನ್ನ ವೇಷವನ್ನುಹಾಕಿಕೊಂಡು ಬಂದು
ಆ ಕಳ್ಳರೇ ಈ ದುಷ್ಕಾರ್ಯವನ್ನು ಮಾಡಿರಬೇಕು, ಎಂದು
ಸೂಳೆಗೆ ನಂಬಿಕೇ ಹೇಳಿ, ಈ ಪಕ್ಕಾ ಕಳ್ಳರನ್ನು ಹೇಗಾ
ದರೂ ಈ ದಿವಸ ರಾತ್ರೆ ಯಾರು ಹಿಡಿದಾಗ್ಯೂ ಲಕ್ಷವರ
ಹವನ್ನು ಬಹುಮಾನವಾಗಿ ಕೊಡುತೇನೆಂದು ಖಂಡಿತ

ವಾಗಿ ಅಪ್ಪಣೆಮಾಡಿದನು. ಮರುದಿವಸ ಸೆಟ್ಟಿಗಳಿಬ್ಬರೂ ಅಡಿಗೂಲಜ್ಜಿಯ ಮನೆಗೆ ಹೋಗಿ ಭೋಜನಮಾಡುತ್ತಿರುವಾಗ,

ಪಗಡಾಲುಸೆಟ್ಟಿ—ಏನಜ್ಜಿ, ಊರಸಮಾಚಾರ?

ಅಜ್ಜಿ—ಈ ಹೊಸ ಕಳ್ಳರ ಹಾವಳಿ ಬಲವಾಯಿತಪ್ಪಾ, ಇಂಥಾ ಕಳ್ಳರನ್ನು ತಾನು ಹಿಡಿಯುತ್ತೇನೆ, ಇತರರ ಕೈಲಾಗದು ಎಂದು ಪರಾಕ್ರಮವನ್ನು ಕೊಚ್ಚಿಕೊಂಡು ಪ್ರಧಾನಿಯ ಮಗಳು ಶಪಥಮಾಡಿಕೊಂಡಿದಾಳಂತೆ. ಈ ತರುಣಿಯು ಯುದ್ಧಗಳಿಗೆ ಕೂಡ ಹೋಗಿ ಜೈಸಿಕೊಂಡು ಶತ್ರುಗಳ ತಲೆಯನ್ನು ತಂದಿದಾಳಂತೆ, ಇಂಥಾ ಪರಾಕ್ರಮ ಉಳ್ಳವಳಿಗೆ ಕಳ್ಳರು ಸಿಕ್ಕುವುದೇನು ದೊಡ್ಡದೆ? ಕಳ್ಳರು ಸಿಕ್ಕದಿದ್ದರೆ, ಸಿಕ್ಕಿದವರೇ ಕಳ್ಳರು ಎಂದು ಎಲ್ಲಿಯಾದರೂ ಹಿಡಿದುಕೊಂಡಾರು, ನೀವು ರಾತ್ರೇ ಕಾಲದಲ್ಲಿ ಹೊರಕ್ಕೆ ಹೋಗಬೇಡಿ ಕಂದಗಳಾ.

ಮುತ್ಯಾಲಸೆಟ್ಟಿ—ವ್ಯಾಪಾರಕ್ಕಾಗಿ ಬಂದಿರುವ ನಾವು ಇಂಥಾ ಕೆಲಸಕ್ಕೆ ಹೋದೇವೆ ಅಜ್ಜಿ? ನಮ್ಮ ವಿಷಯದಲ್ಲಿ ಯೋಚನೆ ಇಟ್ಟುಕೊಳ್ಳಬೇಡಜ್ಜಿ.

ಮಾರನೇ ದಿವಸ ಬೆಳಗಾದ ಮೇಲೆ ಈ ಸಹೋದರರಾದ ಸೆಟ್ಟಿಗಳಿಬ್ಬರೂ ಅಡಗೂಲಜ್ಜಿಯ ಮನೆಗೆ ಎಂದಿನಹಾಗೆ ಊಟಕ್ಕೆ ಬಂದು ಭೋಜನ ಮಾಡುತಾ ಕೂತುಕೊಂಡಿರುವಾಗ,

ಪಗಡಾಲಸೆಟ್ಟಿ—ನಿನ್ನೇರಾತ್ರಿ ಕಳ್ಳರು ಸಿಕ್ಕಿದರೆ, ಅಜ್ಜಿ; ಪೇಟಿಮಾತೇನಜ್ಜಿ?

ಅಜ್ಜಿ—ಅಯ್ಯೋ! ನಿನ್ನೆರಾತ್ರಿ ನಡೆದ ವಿಪರೀತವನ್ನು ಏನು ವಿವರಿಸಲಿ? ಪ್ರಧಾನಿಯ ಮಗಳು ನಿನ್ನೆರಾತ್ರಿ ಕಳ್ಳರನ್ನು ಹಿಡಿಯಲು ಸಿದ್ಧವಾದಳು. ಆ ಕಳ್ಳರ ಕೈಗೆ ತಾನು ಸಿಕ್ಕುವ ಹಾಗೆ ನಾಯಿಕಸಾನಿಯು ಹೊರಗಡೆ ಕೂತುಕೊಂಡದ್ದು ತಪ್ಪು, ತಾನು ಉಪಾಯವಾಗಿ ಈ ದಿವಸ ಚೋರಗ್ರಹಣ ಮಾಡುವುದು ಖಂಡಿತ. ಯಾರು ಯಾವ ವೇಷದಲ್ಲಿಯೇ ಆಗಲಿ ನಿಜವಾಗಿಯೇ ಆಗಲಿ, ಯಾರೇ ಬಂದಾಗ್ಯೂ ಅವರನ್ನು ಕತ್ತರಿಸಿ ಬಿಡುತೇನೆಂದು ಪ್ರಧಾನಿಯ ಮಗಳು ಪಂಥ ಮಾಡಿಕೊಂಡಿದ್ದಾಳಂತೆ; ಅಂಥಾ ತುಂಟರಾದ ಕಳ್ಳರು ಇವಳ ಕೈಗೆ ಸಿಕ್ಕುತಾರೆಯೆ? ಯಾಕೋ ಊರಲ್ಲಿ ಬದುಕುವುದು ಕಷ್ಟವಾಯಿತು. ಕಳ್ಳರನ್ನು ಹಿಡಿಯುವುದಕ್ಕೆ ಕೈಲಾಗದಿದ್ದರೆ ತಮಗೆ ಅವಮಾನವಾದೀತೆಂಬ ಭಯದಿಂದ ಸಿಕ್ಕಿದವರೇ ಕಳ್ಳರು ಎಂದು ನಿಮ್ಮನ್ನು ಎಲ್ಲಿಯಾದರೂ ಸರ್ಕಾರದ ಊಳಿಗದವರು ಹಿಡಿದುಕೊಂಡು ಹೋದಾರಪ್ಪ; ನೀವು ರಾತ್ರೆ ಹೊರಕ್ಕೆ ಹೋಗಬೇಡಿ ಮಕ್ಕಳ.

ಮುತ್ಯಾಲಸೆಟ್ಟಿ—ಆ ರಾಜಕೀಯ ವಿಚಾರ ನಮಗೇಕೆ ಅಜ್ಜಿ? ನಾವು ಮನೆಯನ್ನು ಬಿಟ್ಟು ಎಲ್ಲಿಯೂ ಹೋಗುವುದಿಲ್ಲ.

ಈ ಪ್ರಕಾರ ಹೇಳಿ ಆ ಸೆಟ್ಟಿಗಳಿಬ್ಬರೂ ತಮ್ಮ ಬಿಡಾರಕ್ಕೆ ಹೊರಟುಹೋದರು. ತರುವಾಯ ಮಾರನೇ ದಿವಸ ಬೆಳಗ್ಗೆ ಅವರಿಬ್ಬರು ಸೆಟ್ಟಿಗಳೂ ಅಡಗೂಲಜ್ಜಿಯ ಮನೆಗೆ ಬಂದು ಎಂದಿನಂತೆ ಊಟಕ್ಕೆ ಕೂತುಕೊಂಡು—ಅಜ್ಜಿ, ಕಳ್ಳರನ್ನು ಮಂತ್ರೀ

ಮಗಳು ಹಿಡಿದ ವರ್ತಮಾನವೇನು? ಎಂದು ಪ್ರಶ್ನೆಮಾಡಲು,

ಅಜ್ಜಿ—ಅಯ್ಯೋ! ಮಂತ್ರೀಮಗಳು ಹೆಮ್ಮೆಯನ್ನು ಹೇಳಿಕೊಂಡದ್ದು ಒಂದೇ. ನಿನ್ನೆಯೂ ಮೊನ್ನೆಯು ಹಾಗೆಯೇ ಗದ್ದಲವಾಯಿತು. ಮೊನ್ನೇರಾತ್ರೆ ದೊರೆಸೂಳೆ ಮಾಡಿದ ಹಾಗೆಯೇ ಹೊರಗಡೆ ತಿಂಡೀ ಸಾಮಾನಿನ ಅಂಗಡಿ ಇಟ್ಟುಕೊಂಡು ಪ್ರಧಾನಿಯ ಮಗಳು ಮನೆಯೊಳಗೆ ಕೂತು ಅಂಗಡಿಗೆ ಎದುರಾಗಿರುವ ಒಂದು ಕಿಟಕಿಯಿಂದ ವ್ಯಾಪಾರ ಮಾಡುವುದಕ್ಕೆ ಅನುಕೂಲಮಾಡಿಕೊಂಡು, ತಾನು ಮಾರುತಾ ಇದ್ದ ತಿಂಡಿಗೆಲ್ಲಾ ವಿಶೇಷವಾಗಿ ಆಫೀಮನ್ನು ಹಾಕಿಸಿ ಅಂಗಡಿಯಲ್ಲಿಡಿಸಿ ತಾನು ಮನೆಯೊಳಗೆ ಕಾದುಕೊಂಡು ಕೂತಿದ್ದಳು. ಅರ್ಧರಾತ್ರೆ ಮೀರಿತು; ಮುನ್ನಾದಿವಸ ಆದಹಾಗೆಯೇ ದೊರೆಯು ಸವಾರಿ ಬಂದು ಆ ಕಿಟಕಿ ಹೊರಗೆ ಕೂಗಿದಂತೆ ಕೇಳಿತು. ಆಗ ಒಳಗಿದ್ದ ಮಂತ್ರಿಪುತ್ರಿಯು—ಬುದ್ಧಿ ಕ್ಷಮಿಸಬೇಕು. ಬಾಗಿಲ ತೆಗೆಯುವುದಿಲ್ಲ; ಯಾರು ಬಂದಾಗ್ಯೂ ಅವರನ್ನು ಛೇದಿಸಿಬಿಡುತೇನೆಂದು ಶಪಥಮಾಡಿದೇನೆ ಎಂದಳು. ಆಗ ದೊರೆಯು—ನೀನು ಮಾಡಿದ ಸಂಕಲ್ಪವೇ ಸರಿಯಾದ್ದು, ನಾನು ಬಂದಿದೇನೆ ಸ್ವಲ್ಪ ಬಾಗಿಲ ತೆಗೆ ಎಂದನು. ಮಂತ್ರಿಪುತ್ರಿಯು—ತಾವೇ ಪ್ರಭುಗಳೆನ್ನುವುದಕ್ಕೆ ಗುರುತೇನು ಎಂದು ಕೇಳಿದಳು. ಅದಕ್ಕೆ ರಾಜನು—ಹಾಗಾದರೆ ನನ್ನ ಗುರುತು ಸಿಕ್ಕುವುದಕ್ಕಾಗಿ ಈ ಉಂಗುರವನ್ನು ನೋಡು ಎಂದು ತನ

ಅಂಗುಳೀಯಕವನ್ನು ತೆಗೆದುಕೊಡುವುದಕ್ಕೆ ಹೋಗಲು ಅದನ್ನು ಇಸಕೊಂಡು ನೋಡುವುದಕ್ಕೆ ಮಂತ್ರಿಪುತ್ರಿಯು ಕಿಟಕಿಯಿಂದ ಕೈಯ್ಯನ್ನು ಈಚೆಗೆ ಚಾಚಿದಳು. ಆಕ್ಷಣ ದಲ್ಲಿ ಅಲ್ಲಿ ನಿಂತಿದ್ದ ದೊರೆಯು ತನ್ನ ಕೈಯಲ್ಲಿದ್ದ ಚಂದ್ರಾ ಯುಧದಿಂದ ಅವಳ ಕೈಯನ್ನು ಕತ್ತರಿಸಿಬಿಟ್ಟು ಹೊರಟು ಹೋದನು. ಬೆಳಗಾಯಿತು. ರಾತ್ರೆ ಪ್ರಧಾನಿಯ ಕುಮಾ ರಿಯ ಹಸ್ತಛೇದನ ಮಾಡಿದವ ದೊರೆಯಲ್ಲ, ಕಳ್ಳನೇ ಆಕೃತ್ಯ ಮಾಡಿದನೆಂದು ತಿಳಿಯಿತು. ತರುವಾಯ ದೊರೆಗೆ ಬಹು ಸಂಕಟ ಉಂಟಾಯಿತು. ಇಂಥಾ ಕಳ್ಳರನ್ನು ಹಿಡಿ ಯಲಾರದ ನಮ್ಮ ಅಧಿಕಾರಿಗಳು ಶುದ್ಧ ಅಪ್ರಯೋಜಕರು ಎಂದು ಕೋಪಗೊಂಡು ಈ ದಿವಸ ರಾತ್ರೆ ಅರಸನೇ ಆ ಚೋರರರನ್ನು ಹಿಡಿಯುುವುದಕ್ಕೆ ಹೊರಡುತಾನಂತೆ. ದೊರೆ ಯೇ ಈ ಕೆಲಸಕ್ಕೆ ಹೊರಟಮೇಲೆ ಆತನಿಗೆ ಸಹಾಯ ಮಾಡತಕ್ಕವರು ಕಡಮೆಯೇ? ಕಳ್ಳರು ಈ ರಾತ್ರೆ ಸಿಕ್ಕು ವುದೇ ಖಂಡಿತ. ಮಕ್ಕಳಾ, ನೀವು ಈ ದಿವಸ ರಾತ್ರೆ ಎಲ್ಲಿಯೂ ಹೊರಕ್ಕೆ ಹೋಗಬೇಡಿ.

ಆಗ ಈ ಅಡಿಗೂಲಜ್ಜಿ ಆಡಿದ ಈ ಮಾತನ್ನು ಕೇಳಿ ಮುತ್ತ್ಯಾ ಲಸೆಟ್ಟಿ ಪಗಡಾಲಸೆಟ್ಟಿ ಇಬ್ಬರೂ ತಮ್ಮ ಮನಸ್ಸಿನಲ್ಲಿ—ಇನ್ನು ನಮ್ಮ ಕೆಲಸವಾಯಿತು ಎಂದುಕೊಂಡು—ಅಜ್ಜಿ, ಹೀಗೆ ಪ್ರತಿದಿನ ವೂ ಭೀತಿಪಟ್ಟುಕೊಂಡು ಈ ಊರಲ್ಲಿ ನಾವು ಇನ್ನೆಷ್ಟು ದಿವಸ ಇರು ವುದಕ್ಕಾದೀತು? ನಾವು ಇಂದು ಸಾಯಂಕಾಲಕ್ಕೆ ಮುಂಚೆಯೇ

ನಮ್ಮೂರಿಗೆ ಪ್ರಯಾಣಮಾಡಿ ಹೊರಡುತೇವೆ, ನಿನಗೆ ಕೊಡಬೇಕಾದ ಊಟದ ಹಣವನ್ನೆಲ್ಲಾ ಕೊಟ್ಟದೇವೆ, ಅದರಮೇಲೆ ನೀನು ಮಾಡಿದ ಉಪಚಾರಕ್ಕಾಗಿ ೧೦೦ ವರಹ ಇನಾಮನ್ನು ಹಿಡಿ, ಎಂದು ಅವಳಿಗೆ ಬಹುಮಾನವನ್ನು ಕೊಟ್ಟು ಆ ಸಹೋದರರಿಬ್ಬರೂ ಹೊರಟು ಹೋದರು.

೭ನೇ ಅಧ್ಯಾಯ.

ರಾತ್ರಿಯಾಯಿತು. ದೊರೆಯು ವೇಷವನ್ನು ಹಾಕಿಕೊಂಡು ಪರಿವಾರ ಯಾವುದೂ ಇಲ್ಲದೆ ಕಳ್ಳರನ್ನು ಹಿಡಿಯಲು ಒಂಟಿಯಾಗಿ ನಗರ ಶೋಧನೆಗೆ ಹೊರಟನು. ಆ ಊರಿನ ಎಲ್ಲಾ ಭಾಗದಲ್ಲಿಯೂ ಸುತ್ತಿಕೊಂಡು ಗ್ರಾಮಾತು ಬಹಿಃ ಇರತಕ್ಕ ಕೆರೆಯ ಕಡೆಗೆ ಹೋದನು. ದೂರದಲ್ಲಿ ದೀಪದ ಬೆಳಕು ಕಾಣಿಸಿತು. ಅದರ ನೇರವನ್ನು ಹಿಡಿದು ಹೋಗಲಾಗಿ, ಇಬ್ಬರು ಶೂದ್ರರು ಚಿಕ್ಕ ಗುಡಾರವನ್ನು ಹಾಕಿಕೊಂಡು ಅದರಲ್ಲಿ ಕಡಲೆಪುರಿ ಇತರ ತಿಂಡೀ ಪದಾರ್ಥಗಳು ಇಂಥಾ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುವುದಕ್ಕಾಗಿ ಕೂತಿದ್ದರು. ಅವರನ್ನು ಕುರಿತು—

ದೊರೆ—ಈ ಮಹಾ ನಿಶಿಯಲ್ಲಿ ಯಾಕೆ ಇಂಥಾ ನಿರ್ಮಾನುಷ್ಯದ ಸ್ಥಳದಲ್ಲಿ ಅಂಗಡಿ ಇಟ್ಟುಕೊಂಡಿದ್ದೀರಿ? ನಿಮ್ಮ ಅಂಗಡಿಯಲ್ಲಿ ಈಗ ಯಾರು ಕೊಂಡುಕೊಳ್ಳುವುದಕ್ಕೆ ಬರುತಾರೆ?

೧ನೇ ಸೆಟ್ಟಿ—ಇಂಥಾ ನಿಶಿಯಲ್ಲಿ ನಮ್ಮ ಅಂಗಡಿ ಸಾಮಾನುಗಳನ್ನು ತೆಗೆದುಕೊಳ್ಳುತಕ್ಕಂಥಾವರು ಯಾರಾದರೂ ಬರುತಾರೆ.

ದೊರೆ--ಅಂಥವರು ಯಾರು?

೨ನೇ ಸೆಟ್ಟಿ—ರಾತ್ರಿಯೇ ವ್ಯಾಪಾರ ಮಾಡಿಕೊಂಡು ಹೊರಟು ಹೋಗತಕ್ಕ ಜನರು, ಕೆಲವರು ಇರುತಾರೆ.

ದೊರೆ—ಅವರು ಯಾರು? ಹೇಳಬೇಕು.

೧ನೇ ಸೆಟ್ಟಿ—ಹಗಲ ಹೊತ್ತಿಲ್ಲದೆ ರಾತ್ರೀಕಾಲದಲ್ಲಿಯೇ ಸಂಚರಿಸತಕ್ಕವರು ಇಂಥವರೆಂದು ತಾವು ಅರಿಯಿರ?

ದೊರೆ—.ನಾನರಿಯೆ. ಅಂಥಾ ಜನ ಯಾರು?

೨ನೇ ಸೆಟ್ಟಿ—ಈ ಹೊತ್ತಿನಲ್ಲಿ ಸಾಮಾನು ಕೊಂಡುಕೊಳ್ಳುವುದಕ್ಕೆ ಕಳ್ಳರೂ ಕಾಕರೂ ಬರುತಾರೆ.

ದೊರೆ—ಯಾವಾಗ ಬರುತಾರೆ?

೨ನೇ ಸೆಟ್ಟಿ—ಅವರು ಬರುವ ಹೊತ್ತಾಯಿತು.

೧ನೇ ಸೆಟ್ಟಿ—ಕೆರೆಯ ನೀರಿನಲ್ಲಿದಾರಿ ಕಾಣುವುದಕ್ಕಾಗಿ ದೀಪಗಳನ್ನು ಸೋರೆ ಬುರುಡೆಗಳಲ್ಲಿ ಹತ್ತಿಸಿಕೊಂಡು ಬರುತಾಇದಾರೆ, ನೋಡಿ ತೇಲುವ ಬುರುಡೆಯ ದೀಪವೇ ಕಳ್ಳರು.

ದೊರೆ—ಆ ಕಳ್ಳರನ್ನು ಹಿಡಿದುಕೊಡಬೇಕಲ್ಲ.

೧ನೇ ಸೆಟ್ಟಿ—ಅಗತ್ಯವಾಗಿ ಆಗಲಿ.

೨ನೇ ಸೆಟ್ಟಿ—ತಾವು ನಮ್ಮ ಅಂಗಡಿಯಲ್ಲಿ ಕೂತುಕೊಂಡಿರಿ.

೧ನೇ ಸೆಟ್ಟಿ—ನಾವು ಒಬ್ಬರು ತಪ್ಪ ಒಬ್ಬರು ಎಚ್ಚರವಾಗಿರುತೇವೆ. ಈ ಗುಡಾರದ ಒಳಭಾಗದಲ್ಲಿ ಮಂಚಹಾಕಿ ಹಾಸಿಗೇ ಹಾಕಿದೆ. ತಾವು ಅದರ ಮೇಲೆ ಪವಡಿಸಿಕೊಳ್ಳಿ ಬುದ್ಧಿ. ನಾವಿಬ್ಬರೂ ಕಾದಿರುತೇವೆ. ಕಳ್ಳರನ್ನು ಹಿಡಿದುಕೊಡು

ವುದೇನೋ ಸರಿ. ಆದರೆ ನಮಗೆ ಇನಾಂ ಕೊಡಿಸಬೇಕು?

ದೊರೆ—ಬೇಕಾದ ಇನಾಮನ್ನು ಕೊಡಿಸುತ್ತೇವೆ ನಿಮಗೇನುಬೇಕು?

೨ನೇ ಸೆಟ್ಟಿ—ಆ ಕಳ್ಳರು ಕದ್ದುತಂದ ಒಡವೆ ಮೊದಲಾದ್ದನ್ನು ಹಾಗೆಯೇ ಕೊಟ್ಟುಬಿಟ್ಟು ತಮಗೆ ಬೇಕಾದ ತಿಂಡಿಯನ್ನು ತೆಗೆದುಕೊಳ್ಳುತ್ತಾರೆ. ಇಂಥವರಲ್ಲಿ ನಾವು ಮಾರಾಟ ಮಾಡುವುದರಿಂದ ನಮಗೆ ಆದಾಯ ಹೆಚ್ಚಾಗಿ ಬರುವುದು. ಅವರನ್ನು ನಾವು ತಮಗೆ ಹಿಡಿದುಕೊಟ್ಟ ಮೇಲೆ ಅವರಿಗೆ ನಮ್ಮಲ್ಲಿ ನಂಬಿಕೆ ತಪ್ಪಿಹೋಗುವುದು. ಅದರ ಜೊತೆಯಲ್ಲಿ ನಮ್ಮ ಆದಾಯವೂ ತಪ್ಪಿ ಹೋಗುವುದು. ಇದೆಲ್ಲವನ್ನೂ ಯೋಚಿಸಿ ತಾವು ನಮಗೆ ಏನಾದರೂ ಅಪ್ಪಣೇ ಕೊಡಿಸಿದರೆ ನಮಗೆ ಅಷ್ಟೇ ಸಾಕು.

ದೊರೆ—ಕಳ್ಳರು ನಮ್ಮ ಕೈಗೆ ಸಿಕ್ಕಲಿ, ನಾಳೆ ಬೆಳಗಾದ ಕೂಡಲೆ ನಿಮ್ಮನ್ನು ದೊರೆಗಳಲ್ಲಿ ಕರೆದುಕೊಂಡು ಹೋಗಿ ೧೦ ಸಾವಿರ ವರಹವನ್ನು ಬಹುಮಾನ ಕೊಡಿಸುತ್ತೇನೆ.

೧-೨ನೇ ಸೆಟ್ಟಿಗಳು—ನಾವು ಬದುಕಿಹೋದೆವು ಬುದ್ಧಿ, ಗುಡಾರದೊಳಕ್ಕೆ ದಯಮಾಡಬೇಕು. ಆ ಕಳ್ಳರು ಇಲ್ಲಿಗೆ ಬರುವುದಕ್ಕೆ ಒಂದು ಜಾವದ ಹೊತ್ತಾದೀತು, ಒಳಗಡೆ ಆ ಮಂಚದ ಮೇಲೆ ಮಲಗಿಕೊಳ್ಳಿ, ಅವರು ಬಂದಕೂಡಲೆ ತಮ್ಮನ್ನು ಎಬ್ಬಿಸುತ್ತೇವೆ.

ಈ ಸೆಟ್ಟಿಗಳು ಆಡಿದ ಮಾತನ್ನು ಕೇಳಿ ದೊರೆಗೆ ಬಹು ಸಂತೋಷವಾಯಿತು; ಆತನು ತನ್ನ ಮನಸ್ಸಿನಲ್ಲಿ—ನಮ್ಮ

ಕೆಲಸ
ಶಾವೂ
ದರಲ್ಲಿ
ಇಂಥಾ
ನರನ್ನು
ಡನ್ನು
ಮಾಡಿ
ಸ್ವತಃ
ಕ್ಯೂ
ದಮುಳೆ
ಸರಿ;
ತಾರೆ;
ವಿಧ
ಂಬಿಕೆ
ನಮಗೆ
ಣತನ
ದೀತು?
ಘನೆ
ಮೇಲಿ
ಯಾಸ

ಪಟ್ಟು ಸುತ್ತಾಡಿಕೊಂಡು ಬಂದಿದ್ದನು; ಒಳ್ಳೆ ನಿದ್ರೆ ಬರುವ

ಹೆ ... ಬೀ ತೂಕಡಿಕೆ
ಮ ... ಡ. ಚೆನ್ನಾಗಿ
ನಿ ... ಬಿತು. ರಾಜ
ನಿಗ ... ದೊರೆಯ
ಕೈಗ ... ದ ಹಾಗೆ
ಮ ... ಹೊತ್ತು
ಕೊ ... ಯಿಯ
ಮು ... ರೆಗಳಿಗೆ
ಎಚ್ಚ ... ಡಿದರು.
ಕೈಕಾ ... ೂದಲು
ತಾನ ... ಿಯೂ
ಇಲ್ಲ; ... ಉಪ್ಪ
ರಿಗೆ, ... ರಾಜಿ
ತೆರೆಗಳ ... ಭಾವ
ಚಿತ್ರಗ ... ತಕ್ಕ
ಗಾಜಿನ ... ವಲಾ
ದ್ದನ್ನು ... ರೂ
ಪುರುಷರ ... ನ್ನೂ
ನೋಡು ... ಾದ
ಭಾವಉಳ್ಳಂಥಾ ಅಮೃತಶಿಲಾ ಪ್ರತಿಮೆಗಳೂ ಇವೇ ಮೊದ
ಲಾದ್ದೆಲ್ಲಾ ಕಾಣಿಸಿದವು.

೮ನೇ ಅಧ್ಯಾಯ

ದೊರೆಗೆ ಆಶ್ಚರ್ಯವಾಯಿತು. ಆಗ ಆ ರಾಜ… ಸ್ಸಿನಲ್ಲಿ—ಇದೇನಾಶ್ಚರ್ಯ ! ನಾನು ಕೆರೇ … ಕೊಂಡ ಗುಡಿಸಲು ಎತ್ತ ಈ ಮಹಾ ಸೌಧ… ನಿಜವಾದ ಸ್ಥಳವೇ ಇಂದ್ರಜಾಲ ಮಹೇಂ… ಣುವ ಸ್ಥಿತಿಯೆ! ಅಲ್ಲಿ ಅಂಗಡಿ ಇಟ್ಟಿದ್ದ …ಳು ಬಂಧಿಸಿ ಇಲ್ಲಿಗೆ ಹೊತ್ತುಕೊಂಡು ಬಂದರೆ! …ನ್ನು ಸಿದರೆ ಅವರೇ ಕಳ್ಳರಿರಬಹುದೆ! ಹೇಗಾದರೂ ಆಗ… ಈಗ ಒಳ್ಳೇಮಾತನ್ನಾಡಿಕೊಂಡು ಪ್ರಾಣವನ್ನು ಉಳಿಸಿಕೊಳ್ಳ ಬೇಕು ; ಎಂಬದಾಗಿ ಯೋಚಿಸಿಕೊಂಡು—ಯಾ…ಪ್ಪಾ ಪುಣ್ಯಾತ್ಮರಾ, ನನ್ನ ಕೈಕಾಲ ಕಟ್ಟನ್ನು ಬಿಚ್ಚಿಯಪ್ಪಾ ಎಂ… ಗಟ್ಟಿಯಾಗಿ ದೀನವಾದ ಸ್ವರದಿಂದ ಕೂಗಿದನು. ಆಗ ಕಾ… ದಸಿಯಲ್ಲಿ ಕೈಕಟ್ಟಿಕೊಂಡು ವಿಶೇಷವಾದ ಭಕ್ತಿಯಿಂದ ನಿಂ… ಹೆಂಗಸು ತನ್ನ ಪಕ್ಕದಲ್ಲಿ ನಿಂತಿದ್ದ ಸೆಟ್ಟಿಗಳಿಗೆ ಕಣ್ಸನ್ನೆ ಮಾಡಿದಳು. ಆ ಕ್ಷಣದಲ್ಲಿಯೇ ಮುತ್ಯಾಲಸೆಟ್ಟಿ ಪಗಡಾ… ಇಬ್ಬರೂ ಮಂಚದ ಕಾಲುಗಳಿಗೆ ದೊರೆಯ ಕೈಕಾಲು… ಕಟ್ಟಿದ್ದ ಹಗ್ಗವನ್ನು ಬಿಚ್ಚಿದರು. ದೊರೆಯು ಎದ್ದು… ಕೊಂಡನು. ಆಗ ಆ ಹೆಂಗಸು ಬಂದು ನಮಸ್ಕಾರಮಾ… ಬುದ್ಧಿ, ನಾನು ತಮ್ಮ ಪತ್ನಿಯಾದ ಚೆಲುವಾ… ; ಸ್ವಾಮಿ ಸವಾರಿ ಚೇಟಿಗೆ ದಯಮಾಡಿಸಿದ್ದಾಗ ನೋಡಿ ಮು… ಮುಖಾಂತರ ಸಂಧಾನವನ್ನು ನಡೆಯಿಸಿ ತಾವು ಮದುವೆ ಮಾಡ್ದು…

ಹೊತ್ತು; ವ
ಮೊದಲಾಯಿತ
ನಿದ್ರೆ ಬ
ನಿಗೆ
ಕೈಗ
ಮಂ
ಕೊಂಡು
ಮ
ರ
ತೆರೆಗಳ
ಚಿತ್ರಗಳ
ಗಾಜಿನ
ದ್ದನ್ನ
ಪ್ರ